# ಭಾರತದ ರಫ್ತು - ಆಮದು ಬ್ಯಾಂಕು ಅಧಿನಿಯಮ, 1981

(1981ರ ಅಧಿನಿಯಮ ಸಂಖ್ಯೆ 28)

**[19.4.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ, 2ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 49 ರಿಂದ 64 ರವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ


**ಅಧ್ಯಾಯ- I**

**ಪ್ರಾರಂಭಿಕ**

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.

**ಅಧ್ಯಾಯ- II**

**ಭಾರತದ ರಫ್ತು - ಆಮದು ಬ್ಯಾಂಕಿನ ಸ್ಥಾಪನೆ ಮತ್ತು ಅದರ ನಿಗಮನ**

3. ಭಾರತದ ರಫ್ತು - ಆಮದು ಬ್ಯಾಂಕ್‌ನ ಸ್ಥಾಪನೆ ಮತ್ತು ನಿಗಮನ.
4. ಅಧಿಕೃತ ಬಂಡವಾಳ

**ಅಧ್ಯಾಯ- III**

**ರಫ್ತು ಮತ್ತು ಆಮದು ಬ್ಯಾಂಕ್‌ನ ವ್ಯವಸ್ಥಾಪನೆ**

5. ವ್ಯವಸ್ಥಾಪನೆ.
6. ಮಂಡಲಿಯ ರಚನೆ.
7. ಸಮಿತಿಗಳು.
8. ನಿರ್ದೇಶಕರ ಮತ್ತು ಸಮಿತಿಗಳ ಸದಸ್ಯರ ಫೀಜು ಮತ್ತು ಭತ್ಯೆಗಳು.
9. ಅನರ್ಹತೆಗಳು.

**ಅಧ್ಯಾಯ- IV**

**ರಫ್ತು ಮತ್ತು ಆಮದು ಬ್ಯಾಂಕ್‌ನ ವ್ಯವಹಾರಗಳು**

10. ರಫ್ತು ಮತ್ತು ಆಮದು ಬ್ಯಾಂಕಿನ ವ್ಯವಹಾರಗಳು.

**ಅಧ್ಯಾಯ- V**

**ರಫ್ತು ಮತ್ತು ಆಮದು ಬ್ಯಾಂಕಿನ ಸಂಪನ್ಮೂಲಗಳು**

11. ಕೇಂದ್ರ ಸರ್ಕಾರ ನೀಡುವ ಸಾಲಗಳು.
12. ರಫ್ತು ಮತ್ತು ಆಮದು ಬ್ಯಾಂಕು ಸಾಲಗಳನ್ನು ಪಡೆಯುವುದು ಮತ್ತು ಠೇವಣಿಗಳನ್ನು ಸ್ವೀಕರಿಸುವುದು.
13. ವಿದೇಶೀ ಕರೆನ್ಸಿಯಲ್ಲಿ ಸಾಲಗಳು.
14. ರಫ್ತು ಮತ್ತು ಆಮದು ಬ್ಯಾಂಕಿಗೆ ಅನುದಾನಗಳು, ದೇಣಿಗೆಗಳು, ಇತ್ಯಾದಿ

## ಅಧ್ಯಾಯ- VI

### ರಫ್ತು ಅಭಿವೃದ್ಧಿ ನಿಧಿ

15. ರಫ್ತು ಅಭಿವೃದ್ಧಿ ನಿಧಿ.
16. ರಫ್ತು ಅಭಿವೃದ್ಧಿ ನಿಧಿಗೆ ಜಮೆಗಳು.
17. ರಫ್ತು ಅಭಿವೃದ್ಧಿ ನಿಧಿಯ ಬಳಕೆ.
18. ರಫ್ತು ಅಭಿವೃದ್ಧಿ ನಿಧಿಗೆ ಖರ್ಚುಗಳನ್ನು ಹಾಕುವುದು.
19. ರಫ್ತು ಅಭಿವೃದ್ಧಿ ನಿಧಿಯ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.
20. ರಫ್ತು ಅಭಿವೃದ್ಧಿ ನಿಧಿಯ ಸಮಾಪನ

## ಅಧ್ಯಾಯ- VII

### ಸಾಮಾನ್ಯ ನಿಧಿ, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

21. ಸಾಮಾನ್ಯ ನಿಧಿ.
22. ಲೆಕ್ಕ ಪತ್ರಗಳ ಮತ್ತು ಜಮಾಖರ್ಚಿನ ಪಟ್ಟಿಯ ತಯಾರಿಕೆ.
23. ಸಾಮಾನ್ಯ ನಿಧಿಗೆ ದೊರೆಯುವ ಲಾಭಗಳ ವಿಲೇವಾರಿ.
24. ಲೆಕ್ಕ ಪರಿಶೋಧನೆ.
25. ಉಳಿಸುವಿಕೆ.

## ಅಧ್ಯಾಯ- VIII

### ಅಭಿವೃದ್ಧಿ ಬ್ಯಾಂಕಿನ ಭಾಗಶಃ ವ್ಯವಹಾರದ ವರ್ಗಾವಣೆ

26. ಅಭಿವೃದ್ಧಿ ಬ್ಯಾಂಕಿನ ಭಾಗಶಃ ವ್ಯವಹಾರದ ವರ್ಗಾವಣೆ.

## ಅಧ್ಯಾಯ- IX

### ಸಂಕೀರ್ಣ

27. ರಫ್ತು ಮತ್ತು ಆಮದು ಬ್ಯಾಂಕಿನ ಸಿಬ್ಬಂದಿ.
28. ಅಧಿಕಾರಗಳ ಪ್ರತ್ಯಾಯೋಜನೆ.
29. ವಿವರಪಟ್ಟಿಕೆಗಳು.
30. ವಿಶ್ವಾಸ ಮತ್ತು ರಹಸ್ಯ ಪಾಲನೆಯ ಕರ್ತವ್ಯ.
31. ನೇಮಕಾತಿಗಳಲ್ಲಿನ ನ್ಯೂನತೆಗಳಿಂದ ಕೃತ್ಯ, ಮೊದಲಾದವುಗಳು ಅಸಿಂಧುವಾಗಬಾರದು.
32. ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದಂತೆ ರಫ್ತು ಮತ್ತು ಆಮದು ಬ್ಯಾಂಕಿನೊಂದಿಗೆ ಮಾಡಿಕೊಂಡ ವ್ಯವಸ್ಥೆಯ ಸಲುವಳಿ.
33. ನಿರ್ದೇಶಕರಿಗೆ ನಷ್ಟಭರ್ತಿ.
34. ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ರಕ್ಷಣೆ.
35. ರಫ್ತು ಮತ್ತು ಆಮದು ಬ್ಯಾಂಕಿನ ಸಂಬಂಧದಲ್ಲಿ 1891ರ ಅಧಿನಿಯಮ 18ರ ಅನ್ವಯ
36. 1949ರ ಅಧಿನಿಯಮ ಸಂಖ್ಯೆ 10ರ 34ಎ ಪ್ರಕರಣ ಮತ್ತು 36ಎಡಿ ಪ್ರಕರಣಗಳು ಮಾತ್ರ ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯಿಸುವುದು.

37. 1961ರ ಅಧಿನಿಯಮ ಸಂಖ್ಯೆ 43 ಮತ್ತು 1964ರ ಅಧಿನಿಯಮ 7 - ಇವು ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯಿಸುವುದು.

38. ರಫ್ತು ಮತ್ತು ಆಮದು ಬ್ಯಾಂಕ್‍ನ ಸಮಾಪನ

39. ವಿನಿಯಮಗಳ ರಚನಾಧಿಕಾರ.

40. ಕೆಲವು ಅಧಿನಿಯಮಿತಿಗಳ ತಿದ್ದುಪಡಿ.

41. ತೊಂದರೆಗಳನ್ನು ನಿವಾರಿಸುವ ಅಧಿಕಾರ.

ಮೊದಲನೇ ಅನುಸೂಚಿ

ಎರಡನೇ ಅನುಸೂಚಿ

# ಭಾರತದ ರಫ್ತು - ಆಮದು ಬ್ಯಾಂಕು ಅಧಿನಿಯಮ, 1981

## (1981ರ ಅಧಿನಿಯಮ ಸಂಖ್ಯೆ 28)

[11ನೇ ಸೆಪ್ಟೆಂಬರ್ 1981]

ರಫ್ತುದಾರರು ಮತ್ತು ಆಮದುದಾರರಿಗೆ ಹಣಕಾಸು ಸಹಾಯ ಒದಗಿಸಲು ಭಾರತದ "ರಫ್ತು ಮತ್ತು ಆಮದು ಬ್ಯಾಂಕ್" ಎಂದು ಕರೆಯಲಾಗುವ ಮತ್ತು ದೇಶದ ಅಂತರ್ ರಾಷ್ಟ್ರೀಯ ವ್ಯಾಪಾರವನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಸರಕುಗಳ ಮತ್ತು ಸೇವೆಗಳ ರಫ್ತು ಮತ್ತು ಆಮದು ಚಟುವಟಿಕೆಗೆ ಹಣಕಾಸು ಒದಗಿಸುವ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಸಮನ್ವಯಗೊಳಿಸುವ ಪ್ರಧಾನ ಹಣಕಾಸು ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಒಂದು ನಿಗಮವನ್ನು ಸ್ಥಾಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ- I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಭಾರತದ ರಫ್ತು - ಆಮದು ಬ್ಯಾಂಕ್ ಅಧಿನಿಯಮ, 1981 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದ* ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ವಿವಿಧ ದಿನಾಂಕಗಳನ್ನು ಗೊತ್ತುಪಡಿಸಬಹುದು.

* ಈ ಅಧಿನಿಯಮದ 26ನೇ ಪ್ರಕರಣವನ್ನು ಹೊರತುಪಡಿಸಿ ಉಳಿದ ಎಲ್ಲ ಉಪಬಂಧಗಳು 1.1.1982 ರಿಂದ ಜಾರಿಗೆ ಬಂದಿದೆ. S.O. 919 (E) ದಿನಾಂಕ 29.12.1981

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಲಿ" ಎಂದರೆ 6ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ರಫ್ತು-ಆಮದು ಬ್ಯಾಂಕ್‌ನ ನಿರ್ದೇಶಕರ ಮಂಡಲಿ;

(ಬಿ) "ಅಭಿವೃದ್ಧಿ ಬ್ಯಾಂಕ್" ಎಂದರೆ ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964 (1964ರ 18)ರ ಮೇರೆಗೆ ಸ್ಥಾಪಿಸಲಾದ ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್;

(ಸಿ) " ರಫ್ತು ಮತ್ತು ಆಮದು ಬ್ಯಾಂಕ್" ಎಂದರೆ 3ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಭಾರತದ ರಫ್ತು - ಆಮದು ಬ್ಯಾಂಕ್;

(ಡಿ) " ರಫ್ತು" ಮತ್ತು " ಆಮದು":- ರಫ್ತು ಎಂದರೆ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವೆರಡನ್ನೂ ಭಾರತದಿಂದ ಯಾವುದೇ ಇತರ ದೇಶಕ್ಕೆ ರಫ್ತು ಮಾಡುವುದು ಮತ್ತು

"ಆಮದು" ಎಂದರೆ ಸರಕುಗಳನ್ನು ಅಥವಾ ಸೇವೆಗಳನ್ನು ಅಥವಾ ಅವೆರಡನ್ನೂ ಇತರ ದೇಶದಿಂದ ಭಾರತಕ್ಕೆ ಆಮದು ಮಾಡಿಕೊಳ್ಳುವುದು;

(ಇ) "ಸರಕುಗಳು" ಎಂಬುದರಲ್ಲಿ ಘನ, ದ್ರವ ಮತ್ತು ಅನಿಲರೂಪದಲ್ಲಿರುವ ಎಲ್ಲಾ ಸಾಮಗ್ರಿಗಳು, ವ್ಯಾಪಾರ ಸರಕುಗಳು ಮತ್ತು ವಸ್ತುಗಳು ಹಾಗೂ ಶಕ್ತಿಯ ಎಲ್ಲ ರೂಪಗಳು ಒಳಗೊಳ್ಳುತ್ತವೆ;

(ಎಫ್)"ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ರಿಸರ್ವ್‌ಬ್ಯಾಂಕ್ " ಎಂದರೆ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಮೇರೆಗೆ ರಚಿಸಲಾದ ಭಾರತದ ರಿಸರ್ವ್ ಬ್ಯಾಂಕ್;

(ಐ) "ಅನುಸೂಚಿತ ಬ್ಯಾಂಕ್" ಎಂದರೆ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರ ಎರಡನೇ ಅನುಸೂಚಿಯಲ್ಲಿ ತತ್ಕಾಲದಲ್ಲಿ ಇರುವ ಬ್ಯಾಂಕ್;

(ಜೆ) "ಸೇವೆಗಳು" ಎಂಬುದರಲ್ಲಿ ಈ ಕೆಳಕಂಡವುಗಳು ಒಳಗೊಳ್ಳುತ್ತವೆ, ಎಂದರೆ:-

(i) ಯಾವುದೇ ಹೆಸರಿನಿಂದ ಕರೆಯಲಾಗುವ, ಯಾವುದೇ ಕಾಮಗಾರಿಯ ಅಥವಾ ಯೋಜನೆಯ ಅಥವಾ ಯಾವುದೇ ಚಟುವಟಿಕೆಯ ಉದ್ದೇಶಗಳಿಗಾಗಿ (ತಾಂತ್ರಿಕ ಅಥವಾ ಯಾವುದೇ ಇತರ ಸೇವೆ ಸಲ್ಲಿಸಲು ಕುಶಲ ಅಥವಾ ಅಕುಶಲ ಕಾರ್ಮಿಕರನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಂಡು) ಸಿಬ್ಬಂದಿಯನ್ನು ಒದಗಿಸುವುದು;

(ii) ಯಾವುದೇ ಪೇಟೆಂಟು, ಆವಿಷ್ಕಾರ, ಮಾದರಿ, ವಿನ್ಯಾಸ, ರಹಸ್ಯ ಸೂತ್ರ ಅಥವಾ ಪ್ರಕ್ರಿಯೆ ಅಥವಾ ಅದೇ ಬಗೆಯ ಸ್ವತ್ತಿಗೆ ಸಂಬಂಧಿಸಿದ ಹಕ್ಕುಗಳು, ತಜ್ಞತೆ, ಪರಿಜ್ಞಾನ ಅಥವಾ ಇತರ ಕುಶಲತೆ- ಇವುಗಳನ್ನು ವರ್ಗಾವಣೆ ಮಾಡುವುದು ಅಥವಾ ಅವುಗಳ ವರ್ಗಾವಣೆಯನ್ನು ಸುನಿಶ್ಚಿತಗೊಳಿಸುವುದೂ ಸೇರಿದಂತೆ ತಂತ್ರಜ್ಞಾನವನ್ನು ವರ್ಗಾವಣೆ ಮಾಡುವುದು;

(iii) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಒದಗಿಸುವುದು, ನೀಲಿ ನಕ್ಷೆಗಳನ್ನು, ಯೋಜನೆಗಳನ್ನು ಅಥವಾ ಸಲಹೆಯನ್ನು ನೀಡುವುದು;

(iv) ಯಾವುವೇ ಇತರ ಸಂಪನ್ಮೂಲಗಳನ್ನು ದೊರೆಯುವಂತೆ ಮಾಡುವುದು.

## ಅಧ್ಯಾಯ- II

## ಭಾರತದ ರಫ್ತು - ಆಮದು ಬ್ಯಾಂಕಿನ ಸ್ಥಾಪನೆ ಮತ್ತು ಅದರ ನಿಗಮನ

**3. ಭಾರತದ ರಫ್ತು - ಆಮದು ಬ್ಯಾಂಕಿನ ಸ್ಥಾಪನೆ ಮತ್ತು ನಿಗಮನ.-** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಕ್ಕಾಗಿ ಭಾರತ ರಫ್ತು - ಆಮದು ಬ್ಯಾಂಕ್ ಎಂದು ಕರೆಯಲಾಗುವ ಒಂದು ನಿಗಮವನ್ನು ಸ್ಥಾಪಿಸತಕ್ಕದ್ದು.

(2) ರಫ್ತು ಮತ್ತು ಆಮದು ಬ್ಯಾಂಕು, ಮೇಲೆ ಹೇಳಿದ ಹೆಸರಿನಲ್ಲಿ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಹಕ್ಕನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ದಾವೆ ಹೂಡತಕ್ಕದ್ದು. ಅಥವಾ ದಾವೆಗೆ ಗುರಿಯಾಗತಕ್ಕದ್ದು

(3) ರಫ್ತು ಮತ್ತು ಆಮದು ಬ್ಯಾಂಕಿನ ಪ್ರಧಾನ ಕಚೇರಿಯು ಮುಂಬೈಯಲ್ಲಿ ಅಥವಾ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ಇತರ ಸ್ಥಳದಲ್ಲಿ ಇರತಕ್ಕದ್ದು.

(4) ರಫ್ತು ಮತ್ತು ಆಮದು ಬ್ಯಾಂಕು ಭಾರತದಲ್ಲಿ ಅಥವಾ ಹೊರಗಡೆ ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಸ್ಥಳಗಳಲ್ಲಿ ಕಚೇರಿಗಳನ್ನು, ಶಾಖೆಗಳನ್ನು ಅಥವಾ ಏಜೆನ್ಸಿಗಳನ್ನು ಸ್ಥಾಪಿಸಬಹುದು.

**4. ಅಧಿಕೃತ ಬಂಡವಾಳ.–** (1) ರಫ್ತು ಮತ್ತು ಆಮದು ಬ್ಯಾಂಕಿನ ಅಧಿಕೃತ ಬಂಡವಾಳವು ಒಂದು ಸಾವಿರ ಕೋಟಿ ರೂಪಾಯಿಗಳಾಗಿರತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಸದರಿ ಬಂಡವಾಳವನ್ನು ಎರಡು ಸಾವಿರ ಕೋಟಿ ರೂಪಾಯಿಗಳವರೆಗೆ ಹೆಚ್ಚಿಸಬಹುದು.

(2) ರಫ್ತು ಮತ್ತು ಆಮದು ಬ್ಯಾಂಕಿನ ಹೊರಡಿಸಲಾದ ಬಂಡವಾಳವನ್ನು ಪೂರ್ಣವಾಗಿ ಕೇಂದ್ರ ಸರ್ಕಾರವೇ ವಂತಿಗೆ ಮೂಲಕ ಒದಗಿಸತಕ್ಕದ್ದು.

## ಅಧ್ಯಾಯ– III

## ರಫ್ತು ಮತ್ತು ಆಮದು ಬ್ಯಾಂಕ್‌ನ ವ್ಯವಸ್ಥಾಪನೆ

**5. ವ್ಯವಸ್ಥಾಪನೆ.–** (1) ರಫ್ತು ಮತ್ತು ಆಮದು ಬ್ಯಾಂಕ್‌ನ ವ್ಯವಹಾರಗಳ ಮತ್ತು ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿರ್ವಹಣೆಯು ಮಂಡಲಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಆ ಮಂಡಲಿಯು, ರಫ್ತು ಮತ್ತು ಆಮದು ಬ್ಯಾಂಕು ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಅಥವಾ ಮಾಡಬಹುದಾದ ಎಲ್ಲಾ ಕಾರ್ಯಗಳನ್ನು ಮತ್ತು ಕೃತ್ಯಗಳನ್ನು ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳಲ್ಲಿ ಉಪಬಂಧಿಸಲಾದುದನ್ನು ಹೊರತುಪಡಿಸಿ,–

(ಎ) ಅಧ್ಯಕ್ಷನು ಪೂರ್ಣಕಾಲಿಕ ನಿರ್ದೇಶಕನಾಗಿದ್ದರೆ ಅಥವಾ ಅವನು ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಈ ಎರಡೂ ಪದಗಳನ್ನು ಧಾರಣ ಮಾಡಿದ್ದರೆ ಆಗ ಆ ಅಧ್ಯಕ್ಷನು, ಅಥವಾ

(ಬಿ) ಅಧ್ಯಕ್ಷನು ಪೂರ್ಣಕಾಲಿಕ ನಿರ್ದೇಶಕನಾಗಿಲ್ಲದಿದ್ದರೆ ಅಥವಾ ಪೂರ್ಣಕಾಲಿಕ ನಿರ್ದೇಶಕನಾಗಿದ್ದ ಅಧ್ಯಕ್ಷನು ಗೈರುಹಾಜರಿಯಾಗಿದ್ದರೆ, ಆಗ ವ್ಯವಸ್ಥಾಪಕ ನಿರ್ದೇಶಕನು ರಫ್ತು ಮತ್ತು ಆಮದು ಬ್ಯಾಂಕಿನ ವ್ಯವಹಾರಗಳ ಮತ್ತು ಕಾರ್ಯಕಲಾಪಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಆ ಅಧ್ಯಕ್ಷನು ಅಥವಾ ವ್ಯವಸ್ಥಾಪಕ ನಿರ್ದೇಶಕನು ರಫ್ತು ಮತ್ತು ಆಮದು ಬ್ಯಾಂಕು ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಸಹ ಚಲಾಯಿಸಬಹುದು ಅಥವಾ ಮಾಡಬಹುದಾದ ಎಲ್ಲಾ ಕಾರ್ಯಗಳನ್ನು ಮತ್ತು ಕೃತ್ಯಗಳನ್ನು ಸಹಾ ಮಾಡಬಹುದು.

(3) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಂಡಲಿಯು ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಯುಕ್ತ ಗಮನಕೊಟ್ಟು ವ್ಯವಹಾರ ತತ್ವಗಳಿಗನುಸಾರ ಕಾರ್ಯ ನಿರ್ವಹಿಸತಕ್ಕದ್ದು.

(4) ರಫ್ತು ಮತ್ತು ಆಮದು–ಬ್ಯಾಂಕು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡ ಕಾರ್ಯ ನೀತಿಗೆ

ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಮಾರ್ಗದರ್ಶನಕ್ಕಾಗಿ ಲಿಖಿತದಲ್ಲಿ ಕೊಡಬಹುದಾದ ನಿರ್ದೇಶನಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸತಕ್ಕದ್ದು.

**6. ಮಂಡಲಿಯ ರಚನೆ.**- (1) ರಫ್ತು ಮತ್ತು ಆಮದು ಬ್ಯಾಂಕ್‌ನ ನಿರ್ದೇಶಕ ಮಂಡಲಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕೇಂದ್ರ ಸರ್ಕಾರದಿಂದ ನೇಮಕಗೊಂಡ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ:

ಪರಂತು, ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಈ ಎರಡೂ ಪದಗಳ ಕಾರ್ಯನಿರ್ವಹಣೆಗೆ ಒಬ್ಬನೇ ವ್ಯಕ್ತಿಯನ್ನು ನೇಮಕ ಮಾಡಬಹುದು;

(ಬಿ) ರಿಸರ್ವ್ ಬ್ಯಾಂಕು ನಾಮನಿರ್ದೇಶನ ಮಾಡಿದ ಒಬ್ಬ ನಿರ್ದೇಶಕ;

(ಸಿ) ಅಭಿವೃದ್ಧಿ ಬ್ಯಾಂಕು ನಾಮನಿರ್ದೇಶನ ಮಾಡಿದ ಒಬ್ಬ ನಿರ್ದೇಶಕ;

(ಡಿ) ಒಬ್ಬ ನಿರ್ದೇಶಕನನ್ನು, ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸರ್ಕಾರಿ ಕಂಪನಿಯಾಗಿರತಕ್ಕ ಎಕ್ಸ್‌ಪೋರ್ಟ್ ಕ್ರೆಡಿಟ್ ಅಂಡ್ ಗ್ಯಾರಂಟಿ ಕಾರ್ಪೊರೇಷನ್ ಲಿಮಿಟೆಡ್- ಇದು ನಾಮನಿರ್ದೇಶನ ಮಾಡಿದ ಒಬ್ಬ ನಿರ್ದೇಶಕ;

(ಇ) ಕೇಂದ್ರ ಸರ್ಕಾರವು ಕೆಳಕಂಡಂತೆ ನಾಮನಿರ್ದೇಶನ ಮಾಡಿದ ಹನ್ನೆರಡಕ್ಕಿಂತ ಹೆಚ್ಚಿಲ್ಲದ ನಿರ್ದೇಶಕರು,-

(i) ಕೇಂದ್ರ ಸರ್ಕಾರದ ಅಧಿಕಾರಿಗಳಾಗಿರತಕ್ಕ ಐವರು ನಿರ್ದೇಶಕರು;

(ii) ಅನುಸೂಚಿತ ಬ್ಯಾಂಕುಗಳಿಂದ ಮೂರಕ್ಕಿಂತ ಹೆಚ್ಚಿಲ್ಲದ ನಿರ್ದೇಶಕರು;

(iii) ರಫ್ತು ಅಥವಾ ಆಮದು ಅಥವಾ ಅದಕ್ಕೆ ಹಣಕಾಸನ್ನು ಒದಗಿಸುವ ವಿಷಯದಲ್ಲಿ ವಿಶೇಷ ಜ್ಞಾನ ಮತ್ತು ವೃತ್ತಿ ಅನುಭವವಿರತಕ್ಕ ನಾಲ್ಕಕ್ಕಿಂತ ಹೆಚ್ಚಲ್ಲದ ನಿರ್ದೇಶಕರು.

(2) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನು, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಗೊತ್ತುಪಡಿಸಬಹುದಾದಂಥ ಐದು ವರ್ಷಗಳು ಮೀರದ ಅವಧಿಯವರೆಗೆ ಪದಧಾರಣ ಮಾಡಿರತಕ್ಕದ್ದು ಮತ್ತು ಹಾಗೆ ನೇಮಕಗೊಂಡ ಯಾರೇ ವ್ಯಕ್ತಿಯು ಪುನರ್ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(3) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು, (2)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ಪದಾವಧಿಯು ಮುಕ್ತಾಯವಾಗುವ ಮೊದಲೇ ಯಾವುದೇ ಕಾಲದಲ್ಲಿ, ಮೂರು ತಿಂಗಳಿಗಿಂತ ಕಡಿಮೆಯಿಲ್ಲದ ಅವಧಿಯ ಲಿಖಿತ ನೋಟೀಸು ನೀಡುವ ಮೂಲಕ ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ವೇತನ ಮತ್ತು ಭತ್ಯೆಗಳನ್ನು ಸಂದಾಯ ಮಾಡುವ ಮೂಲಕ ಸಂದರ್ಭಾನುಸಾರ, ಅಧ್ಯಕ್ಷನ ಅಥವಾ ವ್ಯವಸ್ಥಾಪಕ ನಿರ್ದೇಶಕನ ಪದಾವಧಿಯನ್ನು ಕೊನೆಗೊಳಿಸುವ ಹಕ್ಕನ್ನು ಹೊಂದಿರತಕ್ಕದ್ದು, ಮತ್ತು ಸಂದರ್ಭಾನುಸಾರ ಅಧ್ಯಕ್ಷನು ಅಥವಾ ವ್ಯವಸ್ಥಾಪಕ ನಿರ್ದೇಶಕನು, ಕೇಂದ್ರ ಸರ್ಕಾರಕ್ಕೆ ಮೂರು ತಿಂಗಳುಗಳಿಗಿಂತ ಕಡಿಮೆ ಇಲ್ಲದ ಅವಧಿಯ ಲಿಖಿತ ನೋಟೀಸು ನೀಡುವ ಮೂಲಕ ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ವೇತನ ಮತ್ತು ಭತ್ಯೆಗಳನ್ನು ನೀಡುವ ಮೂಲಕ (2)ನೇ ಉಪ-ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾಗುವ ಮೊದಲೇ ಯಾವುದೇ ಕಾಲದಲ್ಲಿ ತನ್ನ ಪದವನ್ನು ತ್ಯಾಗ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕನು, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದ ವೇತನ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು.

(5) ಕೇಂದ್ರ ಸರ್ಕಾರವು, ಯಾವುದೇ ಸಮಯದಲ್ಲಿ, ಸಂದರ್ಭಾನುಸಾರ ಅಧ್ಯಕ್ಷನನ್ನು ಅಥವಾ ವ್ಯವಸ್ಥಾಪಕ ನಿರ್ದೇಶಕನನ್ನು ಪದದಿಂದ ತೆಗೆದುಹಾಕಬಹುದು:

ಪರಂತು, ಯಾರೇ ವ್ಯಕ್ತಿಯನ್ನು, ಈ ಉಪಪ್ರಕರಣದ ಮೇರೆಗೆ ಪದದಿಂದ ತೆಗೆದುಹಾಕುವ ಸಂಬಂಧದಲ್ಲಿ ಕಾರಣವನ್ನು ತೋರಿಸಲು ಅವನಿಗೆ ಅವಕಾಶವನ್ನು ನೀಡಿದ ಹೊರತು ಅವನನ್ನು ಆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

(6) (7)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, (1)ನೇ ಉಪಪ್ರಕರಣದ ಖಂಡ (ಬಿ) ಅಥವಾ ಖಂಡ (ಸಿ) ಅಥವಾ ಖಂಡ (ಡಿ) ಅಥವಾ ಖಂಡ (ಇ) ಮೇರೆಗೆ ನಾಮನಿರ್ದೇಶಿತನಾದ ಮತ್ತು ಸರ್ಕಾರದ ನೌಕರನಾಗಿರದ ಅಥವಾ ಪೂರ್ಣಕಾಲಿಕ ನಿರ್ದೇಶಕನಾಗಿರದ ಅಥವಾ ರಿಸರ್ವ್ ಬ್ಯಾಂಕಿನ ಅಥವಾ ಅಭಿವೃದ್ಧಿ ಬ್ಯಾಂಕಿನ ಅಥವಾ ಸದರಿ ಎಕ್ಸ್‌ಪೋರ್ಟ್ ಕ್ರೆಡಿಟ್ ಅಂಡ್ ಗ್ಯಾರಂಟಿ ಕಾರ್ಪೊರೇಷನ್ ಲಿಮಿಟೆಡ್ ಅಥವಾ ಅನುಸೂಚಿತ ಬ್ಯಾಂಕಿನ ನೌಕರನಾಗಿರದ ಯಾರೇ ನಿರ್ದೇಶಕನು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ಅವನನ್ನು ನಾಮನಿರ್ದೇಶನ ಮಾಡುವ ಪ್ರಾಧಿಕಾರವು ಈ ಕುರಿತು ನಿರ್ದಿಷ್ಟಪಡಿಸಬಹುದಾದಂತೆ ಮೂರು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಮತ್ತು ಅನಂತರ ಅವನ ಉತ್ತರಾಧಿಕಾರಿಯು ಅವನ ಪದವನ್ನು ವಹಿಸಿಕೊಳ್ಳುವವರೆಗೆ ಪದವನ್ನು ಧಾರಣ ಮಾಡಿರತಕ್ಕದ್ದು ಮತ್ತು ಪುನರ್‌ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು:

ಪರಂತು, ಅಂಥ ಯಾರೇ ನಿರ್ದೇಶಕನು ನಿರಂತರ ಆರು ವರ್ಷಗಳಿಗೆ ಮೀರಿದ ಅವಧಿಯವರೆಗೆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(7) ಈ ಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡ ಯಾರೇ ನಿರ್ದೇಶಕನು, ಅವನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡಿರತಕ್ಕದ್ದು.

(8) ಮಂಡಲಿಯು, ನಿಯಮಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಸಭೆ ಸೇರತಕ್ಕದ್ದು ಮತ್ತು ತನ್ನ ಆ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(9) ಅಧ್ಯಕ್ಷನು ಅಥವಾ ಅವನಿಗೆ ಯಾವುದೇ ಕಾರಣದಿಂದ ಮಂಡಲಿಯ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ ವ್ಯವಸ್ಥಾಪಕ ನಿರ್ದೇಶಕನು ಅಥವಾ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಇವರಿಬ್ಬರಿಗೂ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಈ ಸಂಬಂಧವಾಗಿ ಅಧ್ಯಕ್ಷನಿಂದ ನಾಮನಿರ್ದೇಶನಗೊಂಡ ಯಾರೇ ಇತರ ನಿರ್ದೇಶಕನು ಮತ್ತು ಹಾಗೆ ನಾಮನಿರ್ದೇಶನ ಮಾಡಿಲ್ಲದಿರುವಲ್ಲಿ ಹಾಜರಿದ್ದ ನಿರ್ದೇಶಕರು ತಮ್ಮೊಳಗಿಂದ ಚುನಾಯಿಸಿದ ಇತರ ಯಾರೇ ನಿರ್ದೇಶಕನು, ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(10) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ ನೀಡುವ ನಿರ್ದೇಶಕರ ಬಹುಮತದಿಂದ ನಿರ್ಣಯಿಸತಕ್ಕದ್ದು ಮತ್ತು ಸಮಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ವ್ಯವಸ್ಥಾಪಕ ನಿರ್ದೇಶಕನು ಅಥವಾ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಇವರಿಬ್ಬರ ಗೈರುಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(11) (10)ನೇ ಉಪ-ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಮಂಡಲಿಯ ಪ್ರತಿಯೊಬ್ಬ ನಿರ್ದೇಶಕನು ಒಂದು ಮತವನ್ನು ಹೊಂದಿರತಕ್ಕದ್ದು.

**7. ಸಮಿತಿಗಳು.**- (1) ಮಂಡಲಿಯು, ತಾನು ಸೂಕ್ತವೆಂದು ಆಲೋಚಿಸುವಂಥ ಉದ್ದೇಶಕ್ಕಾಗಿ ಅಥವಾ ಉದ್ದೇಶಗಳಿಗಾಗಿ ಸಮಿತಿಗಳನ್ನು ರಚಿಸಬಹುದು ಮತ್ತು ಆ ಸಮಿತಿಗಳು

ಪೂರ್ಣವಾಗಿ ನಿರ್ದೇಶಕರಿಂದ ಅಥವಾ ಪೂರ್ಣವಾಗಿ ಇತರ ವ್ಯಕ್ತಿಗಳಿಂದ ಅಥವಾ ಭಾಗಶಃ ನಿರ್ದೇಶಕರಿಂದ ಮತ್ತು ಭಾಗಶಃ ಇತರ ವ್ಯಕ್ತಿಗಳಿಂದ ಕೂಡಿರಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ಸಮಿತಿಯು ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಆ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**8. ನಿರ್ದೇಶಕರ ಮತ್ತು ಸಮಿತಿಗಳ ಸದಸ್ಯರ ಫೀಜು ಮತ್ತು ಭತ್ಯೆಗಳು.-** ನಿರ್ದೇಶಕರಿಗೆ ಮತ್ತು ಸಮಿತಿಯ ಸದಸ್ಯರಿಗೆ ಮಂಡಲಿಯ ಅಥವಾ ಈ ಅಧಿನಿಯಮಕ್ಕನುಸಾರವಾಗಿ ರಚಿಸಲಾದ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ಮತ್ತು ರಫ್ತು ಮತ್ತು ಆಮದು ಬ್ಯಾಂಕಿನ ಯಾವುದೇ ಇತರ ಕೆಲಸ ಮಾಡುವುದಕ್ಕಾಗಿ ನಿಯಮಿಸಲಾದಂಥ ಫೀಜನ್ನು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು:

ಪರಂತು, ಅಧ್ಯಕ್ಷನು ಪೂರ್ಣಕಾಲಿಕ ಅಧ್ಯಕ್ಷನಾಗಿ ನೇಮಕವಾಗಿದ್ದರೆ ಆತನಿಗೆ ಅಥವಾ ಸರ್ಕಾರದ, ರಿಸರ್ವ್ ಬ್ಯಾಂಕ್‌ನ ಅಥವಾ ಅಭಿವೃದ್ಧಿ ಬ್ಯಾಂಕ್‌ನ ಅಧಿಕಾರಿಯಾಗಿರುವ ವ್ಯವಸ್ಥಾಪಕ ನಿರ್ದೇಶಕನಿಗೆ ಅಥವಾ ಯಾವುದೇ ಇತರ ನಿರ್ದೇಶಕನಿಗೆ ಅಥವಾ ಸದಸ್ಯನಿಗೆ ಯಾವುದೇ ಫೀಜು ಸಂದಾಯವಾಗತಕ್ಕದ್ದಲ್ಲ.

**9. ಅನರ್ಹತೆಗಳು.-** ಯಾರೇ ವ್ಯಕ್ತಿಯು, ಈ ಕೆಳಕಂಡ ಸಂದರ್ಭಗಳಲ್ಲಿ, ಎಂದರೆ, -

(ಎ) ತತ್ಕಾಲದಲ್ಲಿ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದರೆ; ಅಥವಾ

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾದರೆ ಅಥವಾ ನಿರ್ಣೀತನಾಗಿದ್ದಿದ್ದರೆ; ಅಥವಾ

(ಡಿ) ಮಂಡಲಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುತ್ತದೆ ಎನ್ನುವ ಮಟ್ಟಿಗೆ ಅವನು ನಿರ್ದೇಶಕನಾಗಿ ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ;

(ಇ) ಯಾವುದೇ ಕಾರಣಕ್ಕಾಗಿ, ಮಂಡಲಿಯಿಂದ ತೆಗೆದುಹಾಕಿದ್ದರೆ

- ಈ ಅಧಿನಿಯಮದ ಮೇರೆಗೆ ರಚಿಸಲಾದ ಮಂಡಲಿಯ ನಿರ್ದೇಶಕನಾಗತಕ್ಕದ್ದಲ್ಲ.

## ಅಧ್ಯಾಯ- IV

## ರಫ್ತು ಮತ್ತು ಆಮದು ಬ್ಯಾಂಕ್‌ನ ವ್ಯವಹಾರಗಳು

**10. ರಫ್ತು ಮತ್ತು ಆಮದು ಬ್ಯಾಂಕಿನ ವ್ಯವಹಾರಗಳು.-** (1) ರಫ್ತು ಮತ್ತು ಆಮದು ಬ್ಯಾಂಕು ತಾನೇ ಅಥವಾ ಭಾರತದಲ್ಲಿನ ಅಥವಾ ಭಾರತದ ಹೊರಗಿನ ಯಾವುದೇ ಬ್ಯಾಂಕ್‌ನ ಹಣಕಾಸು ಸಂಸ್ಥೆಯ ಸಹಯೋಗದೊಂದಿಗೆ ರಫ್ತು ಮತ್ತು ಆಮದಿನ ಉದ್ದೇಶಕ್ಕಾಗಿ ಭಾರತದ ಒಳಗೆ ಅಥವಾ ಭಾರತದ ಹೊರಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡಬಹುದು ಮತ್ತು ಅದು ಸಮುಚಿತವೆಂದು ಭಾವಿಸುವಂಥ ರೀತಿಯಲ್ಲಿ ರಫ್ತು ಮತ್ತು ಆಮದಿಗೆ ಹಣಕಾಸು ಒದಗಿಸುವಲ್ಲಿ

ತೊಡಗಿದ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಸಮನ್ವಯಗೊಳಿಸಲು ಪ್ರಧಾನ ಹಣಕಾಸು ಸಂಸ್ಥೆಯಾಗಿ ಸಹ ಕಾರ್ಯನಿರ್ವಹಿಸತಕ್ಕದ್ದು.

(2) ರಫ್ತು ಮತ್ತು ಆಮದು ಬ್ಯಾಂಕು ಕೆಳಕಂಡ ಬಗೆಯ ಎಲ್ಲ ವ್ಯವಹಾರಗಳನ್ನು ಅಥವಾ ಅವುಗಳಲ್ಲಿ ಯಾವುದೇ ವ್ಯವಹಾರಗಳನ್ನು ನಡೆಸಬಹುದು, ಎಂದರೆ:-

(ಎ) ಈ ಸಂಬಂಧವಾಗಿ ಕೇಂದ್ರ ಸರ್ಕಾರದಿಂದ ರಾಜಪತ್ರದಲ್ಲಿ ಅಧಿಸೂಚಿಸಲಾದ ಅನುಸೂಚಿತ ಬ್ಯಾಂಕಿಗೆ ಅಥವಾ ಯಾವುದೇ ಇತರ ಬ್ಯಾಂಕಿಗೆ ಅಥವಾ ಹಣಕಾಸು ಸಂಸ್ಥೆಗಳಿಗೆ ರಫ್ತು ಅಥವಾ ಆಮದು ಉದ್ದೇಶಕ್ಕಾಗಿ ತಾನು ನೀಡಿದ ಸಾಲಗಳು ಮತ್ತು ಮುಂಗಡಗಳ ಪುನರ್ ಧನ ರೂಪದಲ್ಲಿ ಸಾಲಗಳು ಮತ್ತು ಮುಂಗಡಗಳನ್ನು ನೀಡುವುದು;

(ಬಿ) ರಫ್ತು ಅಥವಾ ಆಮದಿನ ವ್ಯವಹಾರದಲ್ಲಿ ತೊಡಗಿರುವ ಯಾವುದೇ ಕಂಪನಿಯ ಸ್ಟಾಕುಗಳು, ಷೇರುಗಳು, ಬಾಂಡುಗಳು ಅಥವಾ ಡಿಬೆಂಚರುಗಳ ನೀಡಿಕೆಯ ಬಗ್ಗೆ ಭರವಸೆ ಕೊಡುವುದು;

(ಸಿ) ತಾನೇ ಭಾರತದ ಒಳಗೆ ಅಥವಾ ಭಾರತದ ಹೊರಗೆ ಯಾವುದೇ ಸರ್ಕಾರ, ಬ್ಯಾಂಕು ಅಥವಾ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಭಾರತದ ಒಳಗೆ ಅಥವಾ ಭಾರತದ ಹೊರಗೆ ಸವಾಲು ಬಂಧಪತ್ರಗಳನ್ನು ಅಥವಾ ಗ್ಯಾರಂಟಿಗಳನ್ನು ನೀಡುವುದು;

(ಡಿ) ರಫ್ತು ಅಥವಾ ಆಮದಿನ ವ್ಯವಹರಣೆಗಳಿಂದ ಉದ್ಭವಿಸುವ ವಿನಿಮಯ ಪತ್ರಗಳನ್ನು ಅಥವಾ ಪ್ರಾಮಿಸರಿ ನೋಟುಗಳನ್ನು, ಬಿಲ್ಲುಗಳನ್ನು ಭಾರತದ ಒಳಗೆ ಅಥವಾ ಭಾರತದ ಹೊರಗೆ ಸ್ವೀಕರಿಸುವುದು, ಸಂಗ್ರಹಿಸುವುದು, ಸೋಡಿ ಮಾಡುವುದು ಅಥವಾ ಪುನರ್ ಸೋಡಿ ಮಾಡುವುದು, ಖರೀದಿಸುವುದು, ಮಾರಾಟ ಮಾಡುವುದು ಅಥವಾ ವರ್ಗಾವಣೆ ಮಾಡುವುದು ಮತ್ತು ಅಂಥ ಬಿಲ್ಲುಗಳು ಅಥವಾ ಪ್ರಾಮಿಸರಿ ನೋಟುಗಳ ಬದಲಾಗಿ ಭಾರತದ ಹೊರಗೆ ಅಥವಾ ಭಾರತದ ಒಳಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದು;

(ಇ) ಸಾಲ ಪತ್ರಗಳನ್ನು ನೀಡುವುದು, ತೆರೆಯುವುದು, ಹೊರಡಿಸುವುದು ಅಥವಾ ದೃಢೀಕರಿಸುವುದು, ಹಿಂಬರಹ ಮಾಡುವುದು, ಅವುಗಳ ಮೇರೆಗೆ ಬರೆಯಲಾದ ದಸ್ತಾವೇಜುಗಳನ್ನು ಮತ್ತು ಬಿಲ್ಲುಗಳನ್ನು ವರ್ಗಾಯಿಸುವುದು ಅಥವಾ ಸಂಗ್ರಹಿಸುವುದು;

(ಎಫ್) ರಫ್ತು ಅಥವಾ ಆಮದು ಉದ್ದೇಶಗಳಿಗಾಗಿ, ಸರ್ಕಾರದಿಂದ ಸರ್ಕಾರ ಮತ್ತು ವಾಣಿಜ್ಯ ಸಾಲ ಸಂಯೋಜನೆಯನ್ನು ಒಳಗೊಂಡಿರುವ ಯಾವುದೇ ವ್ಯವಹಾರವನ್ನು ಕೈಗೊಳ್ಳುವುದು;

(ಜಿ) ರಫ್ತು ಅಥವಾ ಆಮದು ಉದ್ದೇಶಗಳಿಗಾಗಿ ಭಾರತದ ಹೊರಗಿನ ಯಾವುದೇ ವಿದೇಶೀ ರಾಜ್ಯದ ಸರ್ಕಾರಕ್ಕೆ ಅಥವಾ ಯಾವುದೇ ಹಣಕಾಸು ಸಂಸ್ಥೆಗೆ ಅಥವಾ ವ್ಯಕ್ತಿಗೆ ಸಾಲಗಳನ್ನು ಪರಿಮಿತಿಗೊಳಿಸುವುದು;

(ಹೆಚ್) ಭಾರತದ ಹೊರಗಡೆ ಯಾವುದೇ ಭಾರತೀಯ ಜಂಟಿ ಉದ್ಯಮಕ್ಕೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದು;

(ಐ) ಭಾರತದಲ್ಲಿ ಯಾರೇ ವ್ಯಕ್ತಿಗೆ ಭಾರತದ ಹೊರಗಡೆ ಯಾವುದೇ ದೇಶದಲ್ಲಿನ ಯಾವುದೇ ಜಂಟಿ ಉದ್ಯಮದಲ್ಲಿನ ಅವನ ಸಾಮಾನ್ಯ ವಂತಿಗೆಯ ಸಂಬಂಧದಲ್ಲಿ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದು;

(ಜೆ) ಗುತ್ತಿಗೆ ಆಧಾರದ ಮೇಲೆ ಯಂತ್ರ ಮತ್ತು ಸಾಧನ ಸಾಮಗ್ರಿಯ ರಫ್ತು ಮತ್ತು ಆಮದಿಗೆ ಹಣಕಾಸು ಒದಗಿಸುವುದು;

(ಕೆ) ಭಾರತದ ಹೊರಗಿನ ಯಾವುದೇ ದೇಶದ ಯಾವುದೇ ಅಭಿವೃದ್ಧಿ ಬ್ಯಾಂಕಿನ ಅಥವಾ ರಫ್ತು – ಆಮದು ಬ್ಯಾಂಕ್‌ನ ಸ್ಟಾಕುಗಳು, ಷೇರುಗಳು, ಬಂಧಪತ್ರಗಳು ಅಥವಾ ಡಿಬೆಂಚರುಗಳಿಗೆ ವಂತಿಗೆ ನೀಡುವುದು ಅಥವಾ ಇವುಗಳಲ್ಲಿ ಹಣ ತೊಡಗಿಸುವುದು ಅಥವಾ ಅವುಗಳನ್ನು ಖರೀದಿಸುವುದು;

(ಎಲ್) ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಅವಶ್ಯವಾಗಬಹುದಾದಂತೆ ವಿದೇಶೀ ವಿನಿಮಯವನ್ನು ಖರೀದಿ ಮಾಡುವುದು ಅಥವಾ ಮಾರಾಟ ಮಾಡುವುದು ಅಥವಾ ವಿದೇಶೀ ವಿನಿಮಯದ ಇತರ ವ್ಯವಹಾರಗಳಲ್ಲಿ ತೊಡಗುವುದು;

(ಎಂ) ಭಾರತದಲ್ಲಿನ ಅಥವಾ ಭಾರತದ ಹೊರಗಿನ ಯಾವುದೇ ಬ್ಯಾಂಕಿನಲ್ಲಿ ಯಾವುದೇ ಖಾತೆಯನ್ನು ತೆರೆಯುವುದು ಅಥವಾ ಭಾರತದ ಒಳಗಿನ ಅಥವಾ ಭಾರತದ ಹೊರಗಿನ ಯಾವುದೇ ಬ್ಯಾಂಕ್ ಅಥವಾ ಇತರ ಸಂಸ್ಥೆಯ ಜೊತೆಗೆ ಯಾವುದೇ ಏಜೆನ್ಸಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಅಥವಾ ಅದರ ಏಜೆಂಟ್‌ನಾಗಿ ಅಥವಾ ಸಂಪರ್ಕದಾರನಾಗಿ ಕಾರ್ಯ ನಿರ್ವಹಿಸುವುದು;

(ಎನ್) ತಾನು ನೀಡಿದ ಸಾಲಗಳು ಮತ್ತು ಮುಂಗಡಗಳಿಗೆ ಸಂಬಂಧಿಸಿದ ಯಾವುದೇ ಲಿಖಿತವನ್ನು ಪ್ರತಿಫಲಕ್ಕಾಗಿ ವರ್ಗಾಯಿಸುವುದು;

(ಒ) ಸಹಭಾಗಿತ್ವದ ಪ್ರಮಾಣ ಪತ್ರಗಳನ್ನು ನೀಡುವುದು;

(ಪಿ) ಧಾರಣಾಧಿಕಾರ, ಒತ್ತೆ ಅಥವಾ ಇತರ ಕರಾರು ಸಂಬಂಧವಾದ ಹಕ್ಕುಗಳ ಜಾರಿಗಾಗಿ ಅವಶ್ಯವಾಗುವಷ್ಟರ ಮಟ್ಟಿಗೆ ಸ್ಟಾಕುಗಳು, ಷೇರುಗಳು, ಬಂಧಪತ್ರಗಳು ಅಥವಾ ಡಿಬೆಂಚರುಗಳು ಇವುಗಳಿಗೆ ವಂತಿಗೆ ನೀಡುವುದು ಅಥವಾ ಅವುಗಳಲ್ಲಿ ಹಣ ತೊಡಗಿಸುವುದು ಅಥವಾ ಅವುಗಳನ್ನು ಖರೀದಿಸುವುದು;

(ಕ್ಯೂ) ಅಂತರ ರಾಷ್ಟ್ರೀಯ ವ್ಯಾಪಾರದ ಸಂವರ್ಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಸಂಶೋಧನೆ, ಸಮೀಕ್ಷೆಗಳು, ತಾಂತ್ರಿಕ–ಆರ್ಥಿಕ ಅಥವಾ ಯಾವುದೇ ಇತರ ಅಧ್ಯಯನ–ಇವುಗಳನ್ನು ಕೈಗೊಳ್ಳುವುದು ಮತ್ತು ಅವುಗಳಿಗೆ ಹಣಕಾಸು ಒದಗಿಸುವುದು;

(ಆರ್) ರಫ್ತು ಅಥವಾ ಆಮದಿಗೆ ಯಾವುದೇ ಬಗೆಯ ತಾಂತ್ರಿಕ, ಆಡಳಿತಾತ್ಮಕ ಮತ್ತು ಹಣಕಾಸಿನ ನೆರವನ್ನು ಒದಗಿಸುವುದು;

(ಎಸ್) ರಫ್ತು ನಿಷ್ಠವಾದ ಉದ್ಯಮ ಸಂಸ್ಥೆಗಳನ್ನು ಯೋಜಿಸುವುದು, ಸಂವರ್ಧಿಸುವುದು, ಅಭಿವೃದ್ಧಿಪಡಿಸುವುದು ಮತ್ತು ಅವುಗಳಿಗೆ ಹಣಕಾಸು ಒದಗಿಸುವುದು;

(ಟಿ) ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಸಹಾಯಕ ಸಂಸ್ಥೆಗಳನ್ನು ರಚಿಸುವುದು ಮತ್ತು ಅವುಗಳ ವ್ಯವಹಾರಗಳನ್ನು ನಡೆಸುವುದು;

(ಯು) ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದಂತೆ ಕೇಂದ್ರ ಸರ್ಕಾರದ, ಯಾವುದೇ ರಾಜ್ಯ ಸರ್ಕಾರದ, ರಿಸರ್ವ್ ಬ್ಯಾಂಕಿನ, ಅಭಿವೃದ್ಧಿ ಬ್ಯಾಂಕಿನ ಅಥವಾ ಯಾರೇ ಇತರ ವ್ಯಕ್ತಿಯ ಏಜೆಂಟನಾಗಿ ಕಾರ್ಯ ನಿರ್ವಹಿಸುವುದು;

(ವಿ) ಅಂತರ್ ರಾಷ್ಟ್ರೀಯ ವ್ಯಾಪಾರ ಸಂಬಂಧದಲ್ಲಿ ಮಾರುಕಟ್ಟೆಯ ಸಾಲ ಮತ್ತು ಇವುಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಿಸುವುದು, ಸಂಕಲಿಸುವುದು ಮತ್ತು ಪ್ರಸಾರ ಮಾಡುವುದು;

(ಡಬ್ಲ್ಯೂ) ಕೇಂದ್ರ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಯಾವುದೇ ಇತರ ವ್ಯವಹಾರಗಳನ್ನು ಮಾಡುವುದು;

(ಎಕ್ಸ್) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗಿನ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಪ್ರಾಸಂಗಿಕವಾಗಬಹುದಾದ ಅಥವಾ ಆನುಷಂಗಿಕವಾಗಬಹುದಾದ ಇತರ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡುವುದು ಮತ್ತು ಇದರಲ್ಲಿ ಸ್ವತ್ತಿನ ಯಾವುದೇ ಮಾರಾಟ ಅಥವಾ ವರ್ಗಾವಣೆಯೂ ಸೇರುತ್ತದೆ.

(3) (1) ಮತ್ತು (2)ನೇ ಉಪಪ್ರಕರಣದಲ್ಲಿ ನಮೂದಿಸಲಾದ ಸೇವೆಗಳ ಯಾವುದೇ ಪ್ರತಿಫಲವಾಗಿ ರಫ್ತು ಮತ್ತು ಆಮದು ಬ್ಯಾಂಕು ಒಪ್ಪಂದ ಮಾಡಿಕೊಳ್ಳಬಹುದಾದಂಥ ಕಮಿಷನ್, ದಳ್ಳಾಳಿ, ಬಡ್ಡಿ, ಸಂಭಾವನೆ ಅಥವಾ ಶುಲ್ಕವನ್ನು ಸ್ವೀಕರಿಸಬಹುದು.

(4) ರಫ್ತು ಮತ್ತು ಆಮದು ಬ್ಯಾಂಕು ತನ್ನವೇ ಬಂಧಪತ್ರಗಳ ಅಥವಾ ಡಿಬೆಂಚರುಗಳ ಭದ್ರತೆಯ ಮೇಲೆ ಯಾವುದೇ ಸಾಲವನ್ನು ಅಥವಾ ಮುಂಗಡವನ್ನು ಅಥವಾ ಯಾವುದೇ ಇತರ ಹಣಕಾಸಿನ ಸೌಕರ್ಯವನ್ನು ನೀಡತಕ್ಕದ್ದಲ್ಲ.

## ಅಧ್ಯಾಯ- V

## ರಫ್ತು ಮತ್ತು ಆಮದು ಬ್ಯಾಂಕಿನ ಸಂಪನ್ಮೂಲಗಳು

**11. ಕೇಂದ್ರ ಸರ್ಕಾರ ನೀಡುವ ಸಾಲಗಳು.–** (1) ಕೇಂದ್ರ ಸರ್ಕಾರವು, ಈ ಬಗ್ಗೆ ಸಂಸತ್ತು ಸೂಕ್ತ ಧನ ವಿನಿಯೋಗದ ಬಗ್ಗೆ ಕಾನೂನನ್ನು ಮಾಡಿದ ತರುವಾಯ ರಫ್ತು ಮತ್ತು ಆಮದು ಬ್ಯಾಂಕಿಗೆ ಈ ಕೆಳಕಂಡ ಮೊತ್ತವನ್ನು ಮುಂಗಡವಾಗಿ ನೀಡಬಹುದು,–

(ಎ) ಶೇಕಡ ಐದು ಕಾಲರಷ್ಟು ಬಡ್ಡಿ ದರದಲ್ಲಿ ಹದಿನೈದು ಸಮಾನ ವಾರ್ಷಿಕ ಕಂತುಗಳಲ್ಲಿ ಕೋಟಿ ರೂಪಾಯಿಗಳ ಸಾಲವನ್ನು ನೀಡುವುದು ಮತ್ತು ಸಾಲವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯು ಮುಕ್ತಾಯವಾದ ಮೇಲೆ ಮರು ಸಂದಾಯವು ಆರಂಭವಾಗುವುದು, ಮತ್ತು

(ಬಿ) ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸಾಲದ ರೂಪದಲ್ಲಿ ಇನ್ನೂ ಹೆಚ್ಚಿನ ಮೊತ್ತಗಳನ್ನು ನೀಡುವುದು:

ಪರಂತು, ಕೇಂದ್ರ ಸರ್ಕಾರವು, ರಫ್ತು ಮತ್ತು ಆಮದು ಬ್ಯಾಂಕು ತನಗೆ ಮಾಡಿಕೊಂಡ ಮನವಿಯ ಮೇರೆಗೆ ಕಂತುಗಳ ಸಂಖ್ಯೆಯನ್ನು ಹೆಚ್ಚಿಸಬಹುದು ಅಥವಾ ಕಂತಿನ ಮೊತ್ತದಲ್ಲಿ ಬದಲಾವಣೆ ಮಾಡಬಹುದು ಅಥವಾ (ಎ) ಖಂಡದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಕಂತಿನ ದಿನಾಂಕವನ್ನು ಬದಲಾಯಿಸಬಹುದು.

**12. ರಫ್ತು ಮತ್ತು ಆಮದು ಬ್ಯಾಂಕು ಸಾಲಗಳನ್ನು ಪಡೆಯುವುದು ಮತ್ತು ಠೇವಣಿಗಳನ್ನು ಸ್ವೀಕರಿಸುವುದು.–** (1) ರಫ್ತು ಮತ್ತು ಆಮದು ಬ್ಯಾಂಕು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ,–

(ಎ) ಕೇಂದ್ರ ಸರ್ಕಾರದ, ಖಾತರಿ ಸಹಿತವಾದ ಅಥವಾ ಖಾತರಿ ರಹಿತವಾದ ಬಂಧಪತ್ರಗಳನ್ನು ಮತ್ತು ಡಿಬೆಂಚರುಗಳನ್ನು ಹೊರಡಿಸಬಹುದು ಅಥವಾ ಮಾರಾಟ ಮಾಡಬಹುದು;

(ಬಿ) ರಿಸರ್ವ್ ಬ್ಯಾಂಕಿನಿಂದ ಈ ಕೆಳಕಂಡಂತೆ ಹಣವನ್ನು ಸಾಲವಾಗಿ ಪಡೆಯಬಹುದು:–

(i) ಈ ಹಣವನ್ನು ತಗಾದೆಯ ಮೇಲೆ ಅಥವಾ ಭಾರತದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ (ಚರ ಸ್ವತ್ತಿನ ಹೊರತಾದ) ನ್ಯಾಸಧಾರಿಯು ನ್ಯಾಸದ ಹಣವನ್ನು ಹೂಡಲು ಅಧಿಕೃತಗೊಳಿಸಿದ ಸ್ಟಾಕುಗಳು, ನಿಧಿಗಳು ಮತ್ತು ಭದ್ರತೆಗಳ

ಆಧಾರದ ಮೇಲೆ ಹಾಗೆ ಸಾಲವಾಗಿ ಪಡೆದಿರುವ ಹಣವನ್ನು ಸಾಲ ಪಡೆದ ದಿನಾಂಕದಿಂದ ತೊಂಬತ್ತು ದಿವಸಗಳು ಮೀರದ ಅವಧಿಯು ಮುಕ್ತಾಯವಾದ ಮೇಲೆ ಮರು ಸಂದಾಯ ಮಾಡುವುದು.

(ii) ವಾಸ್ತವಿಕ ವಾಣಿಜ್ಯ ಅಥವಾ ವಹಿವಾಟುಗಳಿಂದ ಒದಗಿಬರುವ ಮಾನ್ಯತೆ ಪಡೆದ ಎರಡು ಅಥವಾ ಹೆಚ್ಚಿನ ಸಹಿಗಳನ್ನು ಹೊಂದಿರುವ ಮತ್ತು ಸಾಲದ ದಿನಾಂಕದಿಂದ ಐದು ವರ್ಷಗಳ ಒಳಗಾಗಿ ಪಕ್ವವಾಗುವ ಮತ್ತು ವಿನಿಮಯ ಪತ್ರಗಳ ಅಥವಾ ಪ್ರಾಮಿಸರಿ ನೋಟುಗಳ ಆಧಾರದ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು;

(iii) ಭಾರತ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 46 ಸಿ ಪ್ರಕರಣದ ಮೇರೆಗೆ ಸ್ಥಾಪಿಸಲಾದ ರಾಷ್ಟ್ರೀಯ ಕೈಗಾರಿಕಾ ಸಾಲ (ದೀರ್ಘಾವಧಿ ವಹಿವಾಟು) ನಿಧಿಯಿಂದ ಆ ಪ್ರಕರಣದಲ್ಲಿ ನಮೂದಿಸಿ ಯಾವುದೇ ಉದ್ದೇಶಕ್ಕಾಗಿ ಹಣವನ್ನು ಸಾಲವಾಗಿ ಪಡೆಯುವುದು;

(ಸಿ) ಕೇಂದ್ರ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅನುಮೋದಿಸಬಹುದಾದಂಥ ಭಾರತದಲ್ಲಿನ ಇತರ ಪ್ರಾಧಿಕಾರದಿಂದ, ಸಂಘದಿಂದ ಅಥವಾ ಸಂಸ್ಥೆಗಳಿಂದ ಹಣವನ್ನು ಸಾಲವಾಗಿ ಪಡೆಯಬಹುದು;

(ಡಿ) ರಿಸರ್ವ್‌ಬ್ಯಾಂಕು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅನುಮೋದಿಸಬಹುದಾದಂಥ ನಿಬಂಧನೆಗಳ ಮೇಲೆ ಠೇವಣಿಯನ್ನು ಇಟ್ಟ ದಿನಾಂಕದಿಂದ ಹನ್ನೆರಡು ತಿಂಗಳಿಗಿಂತ ಕಡಿಮೆ ಇಲ್ಲದ ಅವಧಿಯು ಮುಕ್ತಾಯವಾದ ತರುವಾಯ ಮರು ಸಂದಾಯವಾಗತಕ್ಕ ಠೇವಣಿಗಳನ್ನು ಸ್ವೀಕರಿಸಬಹುದು.

(2) ಕೇಂದ್ರ ಸರ್ಕಾರವು, ರಫ್ತು ಮತ್ತು ಆಮದು ಬ್ಯಾಂಕು ತನಗೆ ಮಾಡಿಕೊಂಡ ಮನವಿಯ ಮೇರೆಗೆ ಆ ಬ್ಯಾಂಕು ನೀಡಿದ ಬಂಧಪತ್ರಗಳು ಮತ್ತು ಡಿಬೆಂಚರುಗಳಿಗೆ ಸಂಬಂಧಪಟ್ಟಂತೆ ಅಸಲಿನ ಮರು ಸಂದಾಯ ಮತ್ತು ಆ ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯ ಪಾವತಿ ಇವುಗಳ ಬಗ್ಗೆ ಖಾತರಿ ನೀಡಬಹುದು.

**13. ವಿದೇಶೀ ಕರೆನ್ಸಿಯಲ್ಲಿ ಸಾಲಗಳು.-** ವಿದೇಶಿ ವಿನಿಮಯ ವಿನಿಯಮನ ಅಧಿನಿಯಮ, 1973 (1973ರ 46) ಇದರಲ್ಲಿ ಅಥವಾ ವಿದೇಶೀ ವಿನಿಮಯಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಫ್ತು ಮತ್ತು ಆಮದು ಬ್ಯಾಂಕು ಈ ಅಧಿನಿಯಮದ ಮೇರೆಗೆ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದು ಯಾವುದೇ ವಿದೇಶೀ ರಾಜ್ಯದಿಂದ ಅಥವಾ ಯಾವುದೇ ವಿದೇಶೀ ರಾಜ್ಯದಲ್ಲಿನ ಯಾವುದೇ ಬ್ಯಾಂಕಿನಿಂದ ಅಥವಾ ಹಣಕಾಸು ಸಂಸ್ಥೆಯಿಂದ ಅಥವಾ ಅನ್ಯಥಾ ವಿದೇಶಿ ಕರೆನ್ಸಿಯನ್ನು ಸಾಲವಾಗಿ ಪಡೆಯಬಹುದು.

**14. ರಫ್ತು ಮತ್ತು ಆಮದು ಬ್ಯಾಂಕಿಗೆ ಅನುದಾನಗಳು, ದೇಣಿಗೆಗಳು, ಇತ್ಯಾದಿ.-** ರಫ್ತು ಮತ್ತು ಆಮದು ಬ್ಯಾಂಕು ಸರ್ಕಾರದಿಂದ ಅಥವಾ ಭಾರತದ ಒಳಗಿನ ಅಥವಾ ಭಾರತದ ಹೊರಗಿನ ಯಾವುದೇ ಇತರ ಮೂಲದಿಂದ ಕೊಡುಗೆಗಳನ್ನು, ಅನುದಾನಗಳನ್ನು, ದೇಣಿಗೆಗಳನ್ನು ಅಥವಾ ಉಪಕಾರ ಧನಗಳನ್ನು ಸ್ವೀಕರಿಸಬಹುದು.

## ಅಧ್ಯಾಯ- VI

## ರಫ್ತು ಅಭಿವೃದ್ಧಿ ನಿಧಿ

**15. ರಫ್ತು ಅಭಿವೃದ್ಧಿ ನಿಧಿ.-** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ರಫ್ತು ಮತ್ತು

ಆಮದು ಬ್ಯಾಂಕು ರಫ್ತು ಅಭಿವೃದ್ಧಿ ನಿಧಿಯೆಂದು ಕರೆಯಲಾಗುವ ಒಂದು ವಿಶೇಷ ನಿಧಿಯನ್ನು ಸ್ಥಾಪಿಸತಕ್ಕದ್ದು.

**16. ರಫ್ತು ಅಭಿವೃದ್ಧಿ ನಿಧಿಗೆ ಜಮೆಗಳು.–** ಈ ಕೆಳಕಂಡ ಮೊಬಲಗುಗಳನ್ನು ರಫ್ತು ಅಭಿವೃದ್ಧಿ ನಿಧಿಗೆ ಜಮೆ ಮಾಡತಕ್ಕದ್ದು:–

(ಎ) ಸರ್ಕಾರದಿಂದ ಅಥವಾ ಭಾರತದ ಒಳಗಿನ ಅಥವಾ ಹೊರಗಿನ ಯಾವುದೇ ಇತರ ಮೂಲದಿಂದ ಸಾಲಗಳು, ಕೊಡುಗೆಗಳು, ಅನುದಾನಗಳು, ದೇಣಿಗೆಗಳು ಅಥವಾ ಉಪಕಾರ ಧನಗಳು– ಇವುಗಳ ರೂಪದಲ್ಲಿ ಆ ನಿಧಿಯ ಉದ್ದೇಶಗಳಿಗಾಗಿ ಸ್ವೀಕರಿಸಲಾದ ಎಲ್ಲಾ ಮೊಬಲಗುಗಳು;

(ಬಿ) ಆ ನಿಧಿಯಿಂದ ನೀಡಲಾದ ಸಾಲಗಳ, ಮುಂಗಡಗಳ ಅಥವಾ ಇತರ ಸೌಲಭ್ಯಗಳ ಸಂಬಂಧದಲ್ಲಿ ಮರು ಸಂದಾಯಗಳು ಅಥವಾ ವಸೂಲಿಗಳು;

(ಸಿ) ನಿಧಿಯಿಂದ ಮಾಡಲಾಗಿರುವ ಹೂಡಿಕೆಗಳಿಂದ ಪ್ರಾಪ್ತವಾದ ವರಮಾನ ಅಥವಾ ಲಾಭಗಳು; ಮತ್ತು

(ಡಿ) 17ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿಧಿಯ ಉಪಯೋಗದಿಂದಾಗಿ ಬಡ್ಡಿಯ ರೂಪದಲ್ಲಿ ಅಥವಾ ಅನ್ಯಥಾ ಆ ನಿಧಿಗೆ ಒದಗಿ ಬರುವ ಅಥವಾ ಪ್ರಾಪ್ತವಾಗುವ ಆದಾಯ.

**17. ರಫ್ತು ಅಭಿವೃದ್ಧಿ ನಿಧಿಯ ಬಳಕೆ.–** (1) ರಫ್ತು ಮತ್ತು ಆಮದು ಬ್ಯಾಂಕು, ಯಾವುದೇ ಸಾಲದ ಅಥವಾ ಮುಂಗಡದ ಕಾರಣದಿಂದ ಅಥವಾ ಅದರ ನೀಡಿಕೆಯ ಪರಿಣಾಮವಾಗಿ, ಅಥವಾ 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ (2)ನೇ ಉಪಪ್ರಕರಣದ (ಬಿ) ಖಂಡದ ಅಥವಾ (ಸಿ) ಖಂಡದ ಅಥವಾ (ಡಿ) ಖಂಡದ ಅಥವಾ (ಇ) ಖಂಡದ ಅಥವಾ (ಕ್ಯೂ) ಖಂಡದ ಅಥವಾ (ಆರ್) ಖಂಡದ ಅಥವಾ (ಡಬ್ಲ್ಯೂ) ಖಂಡದ ಅಥವಾ (ಎಕ್ಸ್) ಖಂಡದ ಮೇರೆಗೆ ಯಾವುದೇ ವ್ಯವಸ್ಥೆಯನ್ನು ಮಾಡಿಕೊಂಡ ಕಾರಣದಿಂದ ಅಥವಾ ಅದರ ಪರಿಣಾಮವಾಗಿ (2) ಮತ್ತು (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ರಫ್ತು ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ಬಟವಾಡೆ ಮಾಡುವುದು ಅಥವಾ ಖರ್ಚು ಮಾಡುವುದು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರಿಗಣಿಸಿದರೆ, ಅದು ಹಾಗೆ ಮಾಡಬಹುದು:

ಪರಂತು, ಯಾವುದೇ ಅಂಥ ಸಾಲವನ್ನು ಅಥವಾ ಮುಂಗಡವನ್ನು ನೀಡುವುದಕ್ಕೆ ಮುಂಚೆ ಅಥವಾ ಯಾವುದೇ ಅಂಥ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಮುಂಚೆ, ರಫ್ತು ಮತ್ತು ಆಮದು ಬ್ಯಾಂಕು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ರಫ್ತು ಮತ್ತು ಆಮದು ಬ್ಯಾಂಕು, ತಾನು ಬ್ಯಾಂಕಿಂಗ್ ಅಥವಾ ಇತರ ಹಣಕಾಸು ಸಂಸ್ಥೆಗಳು ಅಥವಾ ಇತರ ಏಜೆನ್ಸಿಗಳು ಅಂಥ ಸಾಲವನ್ನು ಅಥವಾ ಮುಂಗಡವನ್ನು ನೀಡುವ ಸಂಭವವಿಲ್ಲವೆಂದು ಅಥವಾ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಯಾವುದೇ ಅಂಥ ವ್ಯವಸ್ಥೆಯನ್ನು ಮಾಡಿಕೊಳ್ಳುವ ಸಂಭವವಿಲ್ಲವೆಂದು ಮನದಟ್ಟು ಮಾಡಿಕೊಳ್ಳತಕ್ಕದ್ದು.

(3) ಕೇಂದ್ರ ಸರ್ಕಾರವು, ತನ್ನ ಅನುಮೋದನೆಯನ್ನು ನೀಡುವುದಕ್ಕೆ ಮುಂಚೆ, ಅಂಥ ಸಾಲ, ಮುಂಗಡ ಅಥವಾ ವ್ಯವಸ್ಥೆಯು ದೇಶದ ಅಂತರ್ ರಾಷ್ಟ್ರೀಯ ವ್ಯಾಪಾರದ

ಹಿತದೃಷ್ಟಿಯಿಂದ ಆದ್ಯತೆಯ ವಿಷಯವಾಗಿರುವ ಕಾರಣ ಅವಶ್ಯವೆಂದು ತಾನು ಮನದಟ್ಟು ಮಾಡಿಕೊಳ್ಳತಕ್ಕದ್ದು.

(4) ಸಂದೇಹಗಳ ನಿವಾರಣೆಗಾಗಿ, ರಫ್ತು ಮತ್ತು ಆಮದು ಬ್ಯಾಂಕು, 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ (2)ನೇ ಉಪಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡ ಅಥವಾ (ಡಿ) ಖಂಡ ಅಥವಾ (ಕ್ಯೂ) ಖಂಡ ಅಥವಾ (ಆರ್) ಖಂಡ ಅಥವಾ (ಎಸ್) ಖಂಡ ಅಥವಾ (ಡಬ್ಲ್ಯೂ) ಖಂಡ ಅಥವಾ (ಎಕ್ಸ್) ಖಂಡದ ಮೇರೆಗೆ, ಯಾವುದೇ ಸಾಲವನ್ನು ಅಥವಾ ಮುಂಗಡವನ್ನು ನೀಡುವ ಸಂಬಂಧದಲ್ಲಿ ಅಥವಾ ಯಾವುದೇ ವ್ಯವಸ್ಥೆಯನ್ನು ಮಾಡಿಕೊಳ್ಳುವ ಸಂಬಂಧದಲ್ಲಿ, ರಫ್ತು ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ಬಟವಾಡೆ ಮಾಡಬೇಕಿಲ್ಲದಿದ್ದರೆ ಅಥವಾ ಖರ್ಚು ಮಾಡಬೇಕಿಲ್ಲದಿದ್ದರೆ, ಆಗ ಕೇಂದ್ರ ಸರ್ಕಾರದ ಅನುಮೋದನೆ ಇಲ್ಲದೆ ಹಾಗೆ ಸಾಲವನ್ನು ಅಥವಾ ಮುಂಗಡವನ್ನು ನೀಡುವುದಕ್ಕೆ ಅಥವಾ ಅಂಥ ಯಾವುದೇ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಈ ಪ್ರಕರಣದಲ್ಲಿ ಒಳಗೊಂಡಿರುವುದ್ಯಾವುದೂ ಅಡ್ಡಿಯನ್ನುಂಟುಮಾಡುತ್ತವೆಂದು ಭಾವಿಸತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**18. ರಫ್ತು ಅಭಿವೃದ್ಧಿ ನಿಧಿಗೆ ಖರ್ಚುಗಳನ್ನು ಹಾಕುವುದು.**- (1) ರಫ್ತು ಅಭಿವೃದ್ಧಿ ನಿಧಿಗೆ ಈ ಕೆಳಕಂಡ ಮೊಬಲಗುಗಳನ್ನು ಖರ್ಚು ಹಾಕತಕ್ಕದ್ದು: -

(ಎ) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಕಾಲಕಾಲಕ್ಕೆ ಬಟವಾಡೆ ಮಾಡಬಹುದಾದ ಅಥವಾ ಖರ್ಚು ಮಾಡಬಹುದಾದಂಥ ಮೊಬಲಗುಗಳು;

(ಬಿ) ಆ ನಿಧಿಯ ಉದ್ದೇಶಗಳಿಗಾಗಿ ಸ್ವೀಕರಿಸಲಾದ ಸಾಲಗಳಿಗೆ ಸಂಬಂಧಪಟ್ಟಂತೆ, ಹೊಣೆಗಳ ತೀರಿಕೆಗಾಗಿ ಅವಶ್ಯವಾಗಬಹುದಾದಂಥ ಮೊಬಲಗುಗಳು;

(ಸಿ) ಆ ನಿಧಿಯಿಂದ ಮಾಡಲಾದ ಹೂಡಿಕೆಯ ಕಾರಣದಿಂದಾಗಿ ಉಂಟಾದ ಯಾವುದೇ ನಷ್ಟ; ಮತ್ತು

(ಡಿ) ಮಂಡಲಿಯು ನಿರ್ಧರಿಸಬಹುದಾದಂತೆ, ಆ ನಿಧಿಯ ಆಡಳಿತ ಮತ್ತು ವಿನಿಯೋಗದ ಕಾರಣದಿಂದ ಅಥವಾ ತತ್ ಸಂಬಂಧದಲ್ಲಿ ಉಂಟಾಗುವಂಥ ವೆಚ್ಚ.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದುದನ್ನು ಹೊರತುಪಡಿಸಿ, ರಫ್ತು ಅಭಿವೃದ್ಧಿ ನಿಧಿಗೆ ಇತರ ಯಾವುದೇ ಮೊಬಲಗನ್ನು ಖರ್ಚು ಹಾಕತಕ್ಕದ್ದಲ್ಲ.

**19. ರಫ್ತು ಅಭಿವೃದ್ಧಿ ನಿಧಿಯ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.**- (1) ರಫ್ತು ಅಭಿವೃದ್ಧಿ ನಿಧಿಯ ಜಮಾ ಖರ್ಚು ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ನಮೂನೆ ಮತ್ತು ವಿಧಾನದಲ್ಲಿ ತಯಾರಿಸತಕ್ಕದ್ದು.

(2) ಮಂಡಲಿಯು, ರಫ್ತು ಅಭಿವೃದ್ಧಿ ನಿಧಿಯ ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಪ್ರತಿ ವರ್ಷ ಡಿಸೆಂಬರ್ 31ನೇ ದಿವಸದಂದು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಇತರ ದಿನಾಂಕದಂದು ಮುಕ್ತಾಯಗೊಳಿಸುವಂತೆ ಮತ್ತು ಶಿಲ್ಕನ್ನು ತಯಾರಿಸುವಂತೆ ನೋಡಿಕೊಳ್ಳತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಲೆಕ್ಕದ ಕಾಲಾವಧಿಯನ್ನು ಮತ್ತೊಂದು ಲೆಕ್ಕದ ಕಾಲಾವಧಿಗೆ ಬದಲಾಯಿಸುವುದಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಆಯಾ ವರ್ಷಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಅಥವಾ ಲೆಕ್ಕಗಳನ್ನು ಮುಕ್ತಾಯ ಮಾಡುವುದಕ್ಕಾಗಿ ಮತ್ತು ಸರಿದೂಗಿಸುವುದಕ್ಕಾಗಿ

ಅಥವಾ ಸಂಬಂಧಿಸಿದ ಇತರೆ ವಿಷಯಗಳಿಗೆ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸುವಂಥ ಉಪಬಂಧಗಳನ್ನು ಮಾಡಬಹುದು.

(3) ಕೇಂದ್ರ ಸರ್ಕಾರವು, 24ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಒಬ್ಬ ಅಥವಾ ಹೆಚ್ಚು ಲೆಕ್ಕ ಪರಿಶೋಧಕರು ರಫ್ತು ಅಭಿವೃದ್ಧಿ ನಿಧಿಯ ಲೆಕ್ಕಪರಿಶೋಧನೆಯನ್ನು ಮಾಡತಕ್ಕದ್ದು. ಅವರು ಆ ಬಗ್ಗೆ ಪ್ರತ್ಯೇಕ ವರದಿಯನ್ನು ಸಲ್ಲಿಸತಕ್ಕದ್ದು.

(4) 24ನೇ ಪ್ರಕರಣದ (2), (3), (4) ಮತ್ತು (6)ನೇ ಉಪಪ್ರಕರಣದ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ರಫ್ತು ಅಭಿವೃದ್ಧಿ ನಿಧಿಯ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅನ್ವಯಿಸತಕ್ಕದ್ದು.

(5) ರಫ್ತು ಮತ್ತು ಆಮದು ಬ್ಯಾಂಕು, ರಫ್ತು ಅಭಿವೃದ್ಧಿ ನಿಧಿಯ ಶಿಲ್ಕು ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿದ ಮತ್ತು ಪರಿಶೋಧನೆಯ ದಿನದಿಂದ ನಾಲ್ಕು ತಿಂಗಳ ಒಳಗಾಗಿ, ಜಮಾ ಖರ್ಚಿನ ಪಟ್ಟಿ ಮತ್ತು ಲೆಕ್ಕಪತ್ರದ ಒಂದು ಪ್ರತಿಯನ್ನು ಲೆಕ್ಕಪರಿಶೋಧಕರ ವರದಿಯ ಪ್ರತಿ ಸಹಿತ ಮತ್ತು ಸಂಬಂಧಪಟ್ಟ ವರ್ಷದ ಅವಧಿಯಲ್ಲಿ ಆ ನಿಧಿಯ ನಿರ್ವಹಣೆಗೆ ಸಂಬಂಧಿಸಿದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸುವಂತೆ ಮಾಡತಕ್ಕದ್ದು.

**20. ರಫ್ತು ಅಭಿವೃದ್ಧಿ ನಿಧಿಯ ಸಮಾಪನ.-** ರಫ್ತು ಅಭಿವೃದ್ಧಿ ನಿಧಿಯನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕವಾಗಿ ಹೊರತು ಮತ್ತು ಆ ಸರ್ಕಾರವು ನಿರ್ದೇಶಿಸಬಹುದಾದಂತೆ ಹೊರತು, ಮುಕ್ತಾಯಗೊಳಿಸತಕ್ಕದ್ದಲ್ಲ ಅಥವಾ ಸಮಾಪನಗೊಳಿಸತಕ್ಕದ್ದಲ್ಲ.

## ಅಧ್ಯಾಯ- VII

## ಸಾಮಾನ್ಯ ನಿಧಿ, ಲೆಕ್ಕಪತ್ರಗಳು ಮತ್ತು ಪರಿಶೋಧನೆ

**21. ಸಾಮಾನ್ಯ ನಿಧಿ.-** ಈ ಅಧಿನಿಯಮದ ಮೇರೆಗೆ ರಫ್ತು ಅಭಿವೃದ್ಧಿ ನಿಧಿಗೆ ಜಮೆಯಾಗಬೇಕಾದಂಥವುಗಳನ್ನು ಹೊರತುಪಡಿಸಿ ರಫ್ತು-ಆಮದಿನ ಎಲ್ಲಾ ಸ್ವೀಕೃತಿಗಳನ್ನು ಸಾಮಾನ್ಯ ನಿಧಿ ಎಂದು ಕರೆಯಲಾಗುವ ಒಂದು ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ರಫ್ತು ಅಭಿವೃದ್ಧಿ ನಿಧಿಗೆ ಖರ್ಚು ಹಾಕಬೇಕಾಗುವಂಥ ಸಂದಾಯಗಳನ್ನು ಹೊರತುಪಡಿಸಿ, ರಫ್ತು ಮತ್ತು ಆಮದು ಬ್ಯಾಂಕಿನ ಎಲ್ಲಾ ಸಂದಾಯಗಳನ್ನು ಆ ಸಾಮಾನ್ಯ ನಿಧಿಯಿಂದ ಮಾಡತಕ್ಕದ್ದು.

**22. ಲೆಕ್ಕ ಪತ್ರಗಳ ಮತ್ತು ಜಮಾ ಖರ್ಚಿನ ಪಟ್ಟಿಯ ತಯಾರಿಕೆ.-** (1) ರಫ್ತು ಮತ್ತು ಆಮದು ಬ್ಯಾಂಕಿನ ಜಮಾ ಖರ್ಚಿನ ಪಟ್ಟಿ ಮತ್ತು ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂತೆ ನಮೂನೆ ಮತ್ತು ವಿಧಾನದಲ್ಲಿ ತಯಾರಿಸತಕ್ಕದ್ದು.

(2) ಮಂಡಲಿಯು, ರಫ್ತು ಮತ್ತು ಆಮದು ಬ್ಯಾಂಕಿನ ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ಪ್ರತಿವರ್ಷ ಡಿಸೆಂಬರ್ 31ನೇ ದಿವಸದಂದು ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮುಕ್ತಾಯಗೊಳಿಸುವಂತೆ ಮತ್ತು ಶಿಲ್ಕನ್ನು ತಯಾರಿಸುವಂತೆ ನೋಡಿಕೊಳ್ಳತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಲೆಕ್ಕದ ಕಾಲಾವಧಿಯನ್ನು ಮತ್ತೊಂದು ಲೆಕ್ಕದ ಕಾಲಾವಧಿಗೆ ಬದಲಾಯಿಸುವುದಕ್ಕೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಆಯಾ ವರ್ಷಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಅಥವಾ ಲೆಕ್ಕಗಳನ್ನು ಮುಕ್ತಾಯ ಮಾಡುವುದಕ್ಕಾಗಿ ಮತ್ತು ಸರಿದೂಗಿಸುವುದಕ್ಕಾಗಿ

ಅಥವಾ ಸಂಬಂಧಿಸಿದ ಇತರೆ ವಿಷಯಗಳಿಗಾಗಿ ತಾನು ಅವಶ್ಯವೆಂದು ಅಥವಾ ವಿಹಿತವೆಂದು ಭಾವಿಸುವಂಥ ಉಪಬಂಧಗಳನ್ನು ಮಾಡಬಹುದು.

**23. ಸಾಮಾನ್ಯ ನಿಧಿಗೆ ದೊರೆಯುವ ಲಾಭಗಳ ವಿಲೇವಾರಿ.-** ರಫ್ತು ಮತ್ತು ಆಮದು ಬ್ಯಾಂಕು ಒಂದು ಮೀಸಲು ನಿಧಿಯನ್ನು ಸ್ಥಾಪಿಸಬಹುದು. ಆ ಸಾಮಾನ್ಯ ನಿಧಿಗೆ ಒದಗಿಬರುವ ವಾರ್ಷಿಕ ಲಾಭಗಳಿಂದ ಆ ರಫ್ತು ಮತ್ತು ಆಮದು ಬ್ಯಾಂಕು ಸೂಕ್ತವೆಂದು ಭಾವಿಸಬಹುದಾದಷ್ಟು ಮೊತ್ತವನ್ನು ಆ ಮೀಸಲು ನಿಧಿಗೆ ವರ್ಗಾಯಿಸಬಹುದು.

(2) ವಸೂಲಾಗದ ಮತ್ತು ಸಂದೇಹಾಸ್ಪದ ಸಾಲಗಳ ಬಗ್ಗೆ, ಆಸ್ತಿಗಳ ಇಳಿತಾಯದ ಬಗ್ಗೆ ಮತ್ತು ಯಾವ ವಿಷಯಗಳ ಬಗ್ಗೆ ವ್ಯವಸ್ಥೆಯು ಅವಶ್ಯಕವಾಗಿರುವುದೋ, ಅಥವಾ ನಿಹಿತವಾಗಿರುವುದೋ ಅವುಗಳ ಬಗ್ಗೆ ಅಥವಾ ಬ್ಯಾಂಕರ್‌ಗಳು ಸಾಮಾನ್ಯವಾಗಿ ವ್ಯವಸ್ಥೆ ಮಾಡಿರುತ್ತಾರೋ, ಆ ಎಲ್ಲ ಇತರ ವಿಷಯಗಳ ಬಗ್ಗೆ ಮತ್ತು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮೀಸಲು ನಿಧಿಯ ಬಗ್ಗೆ ವ್ಯವಸ್ಥೆ ಮಾಡಿದ ತರುವಾಯ ರಫ್ತು ಮತ್ತು ಆಮದು ಬ್ಯಾಂಕು ನಿವ್ವಳ ಲಾಭಗಳ ಶಿಲ್ಕನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸತಕ್ಕದ್ದು.

**24. ಲೆಕ್ಕ ಪರಿಶೋಧನೆ.-** (1) ಕಂಪನಿಗಳ ಅಧಿನಿಯಮ, 1956 (1956ರ 1)ರ 226ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧಕರಾಗಿ ಕಾರ್ಯನಿರ್ವಹಿಸಲು ಯುಕ್ತವಾಗಿ ಅರ್ಹರಾಗಿರುವಂಥ ಲೆಕ್ಕಪರಿಶೋಧಕರು ರಫ್ತು ಮತ್ತು ಆಮದು ಬ್ಯಾಂಕಿನ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡತಕ್ಕದ್ದು. ಅಂಥ ಲೆಕ್ಕಪರಿಶೋಧಕರನ್ನು ಕೇಂದ್ರ ಸರ್ಕಾರವು ತಾನು ನಿಗದಿಪಡಿಸಬಹುದಾದಂಥ ಅವಧಿಗಾಗಿ ಮತ್ತು ಅಂಥ ಪರಿಶ್ರಮ ಧನದ ಮೇಲೆ ನೇಮಕ ಮಾಡತಕ್ಕದ್ದು.

(2) ರಫ್ತು ಮತ್ತು ಆಮದು ಬ್ಯಾಂಕಿನ ವಾರ್ಷಿಕ ಜಮಾಖರ್ಚು ಪಟ್ಟಿಯ ಒಂದು ಪ್ರತಿಯನ್ನು ಲೆಕ್ಕಪರಿಶೋಧಕರಿಗೆ ಒದಗಿಸತಕ್ಕದ್ದು ಮತ್ತು ಅದು, ಜಮಾಖರ್ಚು ಪಟ್ಟಿಗೆ ಸಂಬಂಧಿಸಿದ ಲೆಕ್ಕಪತ್ರಗಳು ಮತ್ತು ವೋಚರುಗಳ ಸಹಿತವಾಗಿ ಪರೀಕ್ಷಿಸುವುದು ಅವರ ಕರ್ತವ್ಯವಾಗಿರತಕ್ಕದ್ದು ಮತ್ತು ಅವರು ರಫ್ತು ಮತ್ತು ಆಮದು ಬ್ಯಾಂಕು ಇಟ್ಟಿರುವ ಎಲ್ಲಾ ಲೆಕ್ಕಪುಸ್ತಕಗಳ ಒಂದು ಪಟ್ಟಿಯನ್ನು ಅವರಿಗೆ ಒಪ್ಪಿಸತಕ್ಕದ್ದು, ಮತ್ತು ರಫ್ತು ಮತ್ತು ಆಮದು ಬ್ಯಾಂಕಿನ ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಎಲ್ಲಾ ಯುಕ್ತ ಕಾಲದಲ್ಲಿ ನೋಡಲು ಅವರಿಗೆ ಅವಕಾಶವಿರತಕ್ಕದ್ದು.

(3) ಲೆಕ್ಕಪರಿಶೋಧಕರು, ಅಂಥ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ, ರಫ್ತು ಮತ್ತು ಆಮದು ಬ್ಯಾಂಕಿನ ಯಾರೇ ನಿರ್ದೇಶಕನನ್ನು ಅಥವಾ ಯಾರೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ಪರೀಕ್ಷಿಸಬಹುದು ಮತ್ತು ಮಂಡಲಿಯಿಂದ ಅಥವಾ ರಫ್ತು ಮತ್ತು ಆಮದು ಬ್ಯಾಂಕಿನ ಅಧಿಕಾರಿಯಿಂದ ಅಥವಾ ಇತರ ನೌಕರನಿಂದ ತಮ್ಮ ಕರ್ತವ್ಯಗಳ ನಿರ್ವಹಣೆಗಾಗಿ ತಾವು ಅವಶ್ಯವೆಂದು ಯೋಚಿಸಬಹುದಾದಂಥ ಮಾಹಿತಿಯನ್ನು ಮತ್ತು ವಿವರಣೆಯನ್ನು ಕೇಳಲು ಹಕ್ಕುಳ್ಳವರಾಗಿರತಕ್ಕದ್ದು.

(4) ಲೆಕ್ಕಪರಿಶೋಧಕರು ತಾವು ಪರೀಕ್ಷಿಸಿದ ವಾರ್ಷಿಕ ಜಮಾಖರ್ಚುಪಟ್ಟಿ ಮತ್ತು ಲೆಕ್ಕಪತ್ರಗಳ ಬಗ್ಗೆ ರಫ್ತು ಮತ್ತು ಆಮದು ಬ್ಯಾಂಕಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು. ಆ ಲೆಕ್ಕಪರಿಶೋಧಕರ ಅಭಿಪ್ರಾಯದಲ್ಲಿ ಆ ಜಮಾಖರ್ಚುಗಳ ಪಟ್ಟಿಯು ಎಲ್ಲಾ ಅವಶ್ಯಕ ವಿವರಗಳನ್ನು ಒಳಗೊಂಡು ಪೂರ್ಣವಾಗಿದೆಯೋ ಹೇಗೆ ಮತ್ತು ಸರಿಯಾಗಿದೆಯೋ ಹೇಗೆ ಎಂಬುದನ್ನು, ರಫ್ತು ಮತ್ತು ಆಮದು ಬ್ಯಾಂಕಿನ ವ್ಯವಹಾರಗಳ ಸ್ಥಿತಿಗತಿಗಳ ಬಗ್ಗೆ ನಿಜವಾದ ಮತ್ತು ಸರಿಯಾದ ಸ್ವರೂಪವನ್ನು ತೋರಿಸುವಂತೆ ಸೂಕ್ತವಾಗಿ ಬರೆಯಲಾಗಿದೆಯೋ ಹೇಗೆ ಎಂಬುದನ್ನು ಮತ್ತು ಮಂಡಲಿ ಮತ್ತು ಮಂಡಲಿಯಿಂದ ಅಥವಾ ರಫ್ತು ಮತ್ತು ಆಮದು

ಬ್ಯಾಂಕಿನ ಯಾರೇ ಅಧಿಕಾರಿಯಿಂದ ಅಥವಾ ಇತರ ನೌಕರನಿಂದ ಯಾವುದೇ ವಿವರಣೆ ಅಥವಾ ಮಾಹಿತಿಯನ್ನು ಅಪೇಕ್ಷಿಸಿದ್ದರೆ ಅದನ್ನು ನೀಡಲಾಗಿದೆಯೋ ಹೇಗೆ ಮತ್ತು ಅದು ಸಮರ್ಪಕವಾಗಿದೆಯೋ ಹೇಗೆ ಎಂಬುದನ್ನು ಅಂಥ ಪ್ರತಿಯೊಂದು ವರದಿಯಲ್ಲಿ ಅವರು ನಮೂದಿಸಿರತಕ್ಕದ್ದು.

(5) ರಫ್ತು ಮತ್ತು ಆಮದು ಬ್ಯಾಂಕು, ರಫ್ತು ಅಭಿವೃದ್ಧಿ ನಿಧಿಯ ಶಿಲ್ಕು ಲೆಕ್ಕಪತ್ರಗಳನ್ನು ಮುಕ್ತಾಯಗೊಳಿಸಿದ ಮತ್ತು ಪರಿಶೋಧನೆಯ ದಿನಾಂಕದಿಂದ ನಾಲ್ಕು ತಿಂಗಳ ಒಳಗಾಗಿ, ಜಮಾಖರ್ಚಿನ ಪಟ್ಟಿ ಮತ್ತು ಲೆಕ್ಕಪತ್ರದ ಒಂದು ಪ್ರತಿಯನ್ನು ಲೆಕ್ಕಪರಿಶೋಧಕರ ವರದಿಯ ಪ್ರತಿ ಸಹಿತ ಮತ್ತು ಸಂಬಂಧಪಟ್ಟ ವರ್ಷದ ಅವಧಿಯಲ್ಲಿ ಆ ನಿಧಿಯ ನಿರ್ವಹಣೆಗೆ ಸಂಬಂಧಿಸಿದ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸುವಂತೆ ಮಾಡತಕ್ಕದ್ದು.

(6) ಹಿಂದಿನ ಉಪಪ್ರಕರಣಗಳಲ್ಲಿ ಒಳಗೊಂಡಿರುವ ಯಾವುದಕ್ಕೂ ಬಾಧಕವಿಲ್ಲದಂತೆ, ಕೇಂದ್ರ ಸರ್ಕಾರವು, ರಫ್ತು ಮತ್ತು ಆಮದು ಬ್ಯಾಂಕಿನ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಹಾಗೂ ಅವುಗಳ ಬಗ್ಗೆ ವರದಿಯನ್ನು ಸಲ್ಲಿಸಲು ಯಾವುದೇ ಕಾಲದಲ್ಲಿ, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನನ್ನು ನೇಮಕ ಮಾಡಬಹುದು ಮತ್ತು ಅಂಥ ಪರೀಕ್ಷೆ ಮತ್ತು ವರದಿಯ ಸಂಬಂಧವಾಗಿ ಯಾವುದೇ ವೆಚ್ಚವನ್ನು ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ರಫ್ತು ಮತ್ತು ಆಮದು ಬ್ಯಾಂಕು ಸಂದಾಯ ಮಾಡತಕ್ಕದ್ದು.

**25. ಉಳಿಸುವಿಕೆ.-** 19ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಲಾದುದನ್ನು ಹೊರತುಪಡಿಸಿ, ಈ ಅಧ್ಯಾಯದಲ್ಲಿ ಒಳಗೊಂಡಿರುವುದಾವುದೂ ರಫ್ತು ಅಭಿವೃದ್ಧಿ ನಿಧಿಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ- VIII

## ಅಭಿವೃದ್ಧಿ ಬ್ಯಾಂಕಿನ ಭಾಗಶಃ ವ್ಯವಹಾರದ ವರ್ಗಾವಣೆ

**26. ಅಭಿವೃದ್ಧಿ ಬ್ಯಾಂಕಿನ ಭಾಗಶಃ ವ್ಯವಹಾರದ ವರ್ಗಾವಣೆ.-** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕ: 1.3.1982ರಿಂದ ಜಾರಿಗೆ ಬಂದಿದೆ. ದಿನಾಂಕದಂದು, ಅಭಿವೃದ್ಧಿ ಬ್ಯಾಂಕಿನ ಯಾವುದೇ ಸ್ವರೂಪದ ಎಲ್ಲಾ ವ್ಯವಹಾರ, ಸ್ವತ್ತು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು,ಹಕ್ಕುಗಳು, ಹಿತಾಸಕ್ತಿಗಳು, ಸೌಲಭ್ಯಗಳು ಮತ್ತು ಬಾಧ್ಯತೆಗಳು, ಆ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಅವು ರಫ್ತು ಮತ್ತು ಆಮದು ಬ್ಯಾಂಕಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ರಫ್ತು ಮತ್ತು ಆಮದು ಬ್ಯಾಂಕಿಗೆ ವರ್ಗಾವಣೆ ಆಗುವ ಮತ್ತು ಅದರಲ್ಲಿ ನಿಹಿತಗೊಳ್ಳುವ ವಿಷಯದಲ್ಲಿ ಅದು ಅಭಿವೃದ್ಧಿ ಬ್ಯಾಂಕಿಗೆ, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅದು ನಿರ್ಧರಿಸಬಹುದಾದಂಥ ಮೊಬಲಗುಗಳನ್ನು ನಿರ್ಧರಿಸಬಹುದಾದಂಥ ಸಂಖ್ಯೆಯ ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು.

(3) ಅಭಿವೃದ್ಧಿ ಬ್ಯಾಂಕಿನ ಯಾವ ಕರಾರುಗಳು, ವಿಲೇಖಗಳು, ಬಂಧಪತ್ರಗಳು, ಒಪ್ಪಂದಗಳು, ಮೊಖ್ತ್ಯಾರನಾಮೆಗಳು ಮತ್ತು ಕಾನೂನುಸಮ್ಮತ ಪ್ರಾತಿನಿಧ್ಯದ ಪತ್ರಗಳು ಮತ್ತು ಯಾವುದೇ ರೀತಿಯ ಇತರ ಲಿಖಿತಗಳು ಆ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಸಂಬಂಧಪಟ್ಟಿರುತ್ತದೆಯೋ, ಮತ್ತು ಯಾವುವು ಅಸ್ತಿತ್ವದಲ್ಲಿವೆಯೋ ಅಥವಾ (9)ನೇ

ಉಪಪ್ರಕರಣದಲ್ಲಿ ಉಲ್ಲೇಖಿಸಲಾದಂಥ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಪರಿಣಾಮಕಾರಿಯಾಗಿರುತ್ತವೆಯೋ ಮತ್ತು ಅವುಗಳಿಗೆ ಸದರಿ ಬ್ಯಾಂಕು ಪಕ್ಷಕಾರವಾಗಿದೆಯೋ ಅಥವಾ ಯಾವುವು ಆ ಬ್ಯಾಂಕಿನ ಪರವಾಗಿವೆಯೋ ಆ ಎಲ್ಲ ಕರಾರುಗಳು, ವಿಲೇಖಗಳು, ಬಂಧಪತ್ರಗಳು, ಒಪ್ಪಂದಗಳು, ಮೊಖ್ತ್ಯಾರನಾಮೆಗಳು ಮತ್ತು ಕಾನೂನು ಸಮ್ಮತ ಪ್ರಾತಿನಿಧ್ಯದ ಪತ್ರಗಳು ಮತ್ತು ಇತರೆ ಲಿಖಿತಗಳು,-

(ಎ) ಆ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಅನನ್ಯವಾಗಿ ಸಂಬಂಧಪಡುವಂಥವು ಆಗಿದ್ದರೆ, ಆಗ ಅವು ಸಂದರ್ಭಾನುಸಾರ ರಫ್ತು ಮತ್ತು ಆಮದು ಬ್ಯಾಂಕಿನ ವಿರುದ್ಧವಾಗಿ ಅಥವಾ ಅದರ ಪರವಾಗಿ ಪೂರ್ಣ ಪ್ರಭಾವ ಮತ್ತು ಪರಿಣಾಮವುಳ್ಳವು ಆಗಿರತಕ್ಕದ್ದು, ಮತ್ತು ಅಭಿವೃದ್ಧಿ ಬ್ಯಾಂಕಿಗೆ ಬದಲಾಗಿ ರಫ್ತು ಮತ್ತು ಆಮದು ಬ್ಯಾಂಕು ಅವುಗಳಿಗೆ ಪಕ್ಷಕಾರನಾಗಿದ್ದಿದ್ದರೆ ಹೇಗೋ ಹಾಗೆ ಅಥವಾ ಅವುಗಳನ್ನು ರಫ್ತು ಮತ್ತು ಆಮದು ಬ್ಯಾಂಕಿನ ಪರವಾಗಿ ಹೊರಡಿಸಿದ್ದಿದ್ದರೆ ಹೇಗೋ ಹಾಗೆ, ಅವುಗಳನ್ನು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಮತ್ತು ಕಾರ್ಯಗತಗೊಳಿಸಬಹುದು; ಮತ್ತು

(ಬಿ) ಅಭಿವೃದ್ಧಿ ಬ್ಯಾಂಕಿನ ರಫ್ತು ಹಣಕಾಸಿನ ಪ್ರಕಾರ್ಯಗಳಿಗೆ ಮಾತ್ರವಲ್ಲದೆ ಆ ಬ್ಯಾಂಕಿನ ಯಾವುವೇ ಇತರ ಪ್ರಕಾರ್ಯಗಳಿಗೆ ಸಂಬಂಧಪಡುವಂಥವು ಆಗಿದ್ದರೆ, ಆಗ ಅವು ಅಭಿವೃದ್ಧಿ ಬ್ಯಾಂಕು ಮತ್ತು ರಫ್ತು ಮತ್ತು ಆಮದು ಬ್ಯಾಂಕು ಇವೆರಡರ ವಿರುದ್ಧವಾಗಿ ಅಥವಾ ಪರವಾಗಿ ಅವು ಪೂರ್ಣ ಪ್ರಭಾವ ಮತ್ತು ಪರಿಣಾಮವುಳ್ಳವು ಆಗಿರತಕ್ಕದ್ದು ಮತ್ತು ಅಭಿವೃದ್ಧಿ ಬ್ಯಾಂಕಿನ ಜೊತೆಗೆ ರಫ್ತು ಮತ್ತು ಆಮದು ಬ್ಯಾಂಕು ಕೂಡ ಅವುಗಳಿಗೆ ಪಕ್ಷಕಾರನಾಗಿದ್ದಿದ್ದರೆ ಹೇಗೋ ಹಾಗೆ ಅಥವಾ ಅವುಗಳನ್ನು ಅಭಿವೃದ್ಧಿ ಬ್ಯಾಂಕಿನ ಮತ್ತು ರಫ್ತು ಮತ್ತು ಆಮದು ಬ್ಯಾಂಕಿನ ಪರವಾಗಿಯೂ ಬ್ಯಾಂಕಿನ ಹೊರಡಿಸಿದ್ದಿದ್ದರೆ ಹೇಗೋ ಹಾಗೆ ಅವುಗಳನ್ನು ಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಮತ್ತು ಕಾರ್ಯಗತಗೊಳಿಸಬಹುದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ದಿನಾಂಕದಂದು, ಅಭಿವೃದ್ಧಿ ಬ್ಯಾಂಕಿನ ರಫ್ತು ಹಣಕಾಸಿನ ಪ್ರಕಾರ್ಯಗಳಿಗೆ ಸಂಬಂಧಿಸಿದ ಯಾವುದೇ ಸ್ವರೂಪದ ಯಾವುದೇ ದಾವೆ, ಅಪೀಲು ಅಥವಾ ಇತರ ಕಾನೂನು ವ್ಯವಹರಣೆಗಳು ಇತ್ಯರ್ಥವಾಗದಿರುವಾಗ, ಅದು, ಅಭಿವೃದ್ಧಿ ಬ್ಯಾಂಕಿನ ವ್ಯವಹಾರವನ್ನು ರಫ್ತು ಮತ್ತು ಆಮದು ಬ್ಯಾಂಕಿಗೆ ವರ್ಗಾಯಿಸುವ ಕಾರಣದಿಂದ ಅಥವಾ ಈ ಅಧಿನಿಯಮದಲ್ಲಿ ಒಳಗೊಂಡಿರುವ ಯಾವುದೇ ಕಾರಣದಿಂದಾಗಿ ಅದನ್ನು ಕೊನೆಗೊಳಿಸತಕ್ಕದ್ದಲ್ಲ, ಮುಂದುವರಿಸದೇ ಇರತಕ್ಕದ್ದಲ್ಲ ಅಥವಾ ಅದರ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಉಂಟು ಮಾಡತಕ್ಕದ್ದಲ್ಲ, ಆದರೆ, ಆ ದಾವೆ, ಅಪೀಲು ಅಥವಾ ಇತರ ವ್ಯವಹರಣೆಯು,-

(ಎ) ಅಭಿವೃದ್ಧಿ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಅನನ್ಯವಾಗಿ ಸಂಬಂಧಪಡುವ ಸಂಬಂಧದಲ್ಲಿ ಅದನ್ನು ರಫ್ತು ಮತ್ತು ಆಮದು ಬ್ಯಾಂಕಿನ ಮೂಲಕ ಅಥವಾ ಅದರ ವಿರುದ್ಧ ಮುಂದುವರಿಸಬಹುದು, ನಡೆಸಿಕೊಂಡು ಹೋಗಬಹುದು ಮತ್ತು ಜಾರಿಗೊಳಿಸಬಹುದು, ಮತ್ತು

(ಬಿ) ಅಭಿವೃದ್ಧಿ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಮಾತ್ರವಲ್ಲದೆ, ಆ ಬ್ಯಾಂಕಿನ ಯಾವುದೇ ಪ್ರಕಾರ್ಯಗಳಿಗೆ ಸಂಬಂಧಪಡುವ ಸಂದರ್ಭದಲ್ಲಿ ಅದನ್ನು ಅಭಿವೃದ್ಧಿ ಬ್ಯಾಂಕು ಮತ್ತು ರಫ್ತು ಮತ್ತು ಆಮದು ಬ್ಯಾಂಕು ಇವುಗಳ ಮೂಲಕ ಅಥವಾ ಇವುಗಳ ವಿರುದ್ಧವಾಗಿ ಅಥವಾ ಕೇಂದ್ರ ಸರ್ಕಾರವು ಲಿಖಿತದ ವಿಶೇಷ ಆದೇಶದ ಮೂಲಕ ಹಾಗೆ ನಿರ್ದೇಶಿಸಿದರೆ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸದರಿ ಎರಡೂ ಬ್ಯಾಂಕುಗಳ ಪೈಕಿ ಯಾವುದೇ ಒಂದರ ಮೂಲಕ ಅಥವಾ ಅದರ ವಿರುದ್ಧ ಮುಂದುವರಿಸಬಹುದು, ನಡೆಸಿಕೊಂಡು ಹೋಗಬಹುದು ಮತ್ತು ಜಾರಿಗೊಳಿಸಬಹುದು.

(5) (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕರಾರು, ವಿಲೇಖ, ಬಂಧಪತ್ರ, ಒಪ್ಪಂದ, ಮುಖ್ತ್ಯಾರನಾಮೆ, ಕಾನೂನು ಸಮ್ಮತ ಪ್ರಾತಿನಿಧ್ಯದ ಪತ್ರ ಅಥವಾ ಇತರ ಲಿಖಿತವು ಅಥವಾ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ದಾವೆ, ಅಪೀಲು ಅಥವಾ ಇತರ ಕಾನೂನು ವ್ಯವಹರಣೆಯು ಅಭಿವೃದ್ಧಿ ಬ್ಯಾಂಕಿನ ರಫ್ತು ಹಣಕಾಸು ಪ್ರಕಾರ್ಯಗಳಿಗೆ ಸಂಬಂಧಿಸಿವೆಯೇ ಹೇಗೆ ಅಥವಾ ಆ ಪ್ರಕಾರ್ಯಗಳಿಗೆ ಅನನ್ಯವಾಗಿ ಸಂಬಂಧಿಸಿದೆಯೇ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದನ್ನು ಕೇಂದ್ರ ಸರ್ಕಾರಕ್ಕೆ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು ಮತ್ತು ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(6) ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, 1964 (1964ರ 18) ಇದರಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಅಥವಾ ಸದರಿ ಅಧಿನಿಯಮದ ಅಥವಾ ಆ ಇತರ ಕಾನೂನಿನ ಕಾರಣದಿಂದಾಗಿ ಜಾರಿಯಲ್ಲಿರುವ ಯಾವುದೇ ಲಿಖಿತದಲ್ಲಿ ಏನೇ ಅಡಕವಾಗಿದ್ದರೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗತಕ್ಕದ್ದು.

## ಅಧ್ಯಾಯ- IX

### ಸಂಕೀರ್ಣ

**27. (1) ರಫ್ತು ಮತ್ತು ಆಮದು ಬ್ಯಾಂಕಿನ ಸಿಬ್ಬಂದಿ.-** (1) ರಫ್ತು ಮತ್ತು ಆಮದು ಬ್ಯಾಂಕು, ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಅಥವಾ ಅಪೇಕ್ಷಣೀಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು ಮತ್ತು ಅವರ ಸೇವೆಯ ನೇಮಕಾತಿ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರ್ಧರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಭಿವೃದ್ಧಿ ಬ್ಯಾಂಕು ರಫ್ತು ಹಣಕಾಸು ಪ್ರಕಾರ್ಯಗಳಿಗೆ ಸಂಬಂಧಿಸಿದ ಅನುಭವ ಹೊಂದಿರುವಂಥ ಸಿಬ್ಬಂದಿಯನ್ನು ರಫ್ತು ಮತ್ತು ಆಮದು ಬ್ಯಾಂಕು ಮತ್ತು ಅಭಿವೃದ್ಧಿ ಬ್ಯಾಂಕು ಇವುಗಳ ನಡುವೆ ಒಪ್ಪಂದವಾಗಬಹುದಾದಂತೆ ಹಾಗೂ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರಫ್ತು ಮತ್ತು ಆಮದು ಬ್ಯಾಂಕು ಉಪಯೋಗಿಸಿಕೊಳ್ಳುವುದು ಮತ್ತು ಅಭಿವೃದ್ಧಿ ಬ್ಯಾಂಕು ಅಂಥ ಸಿಬ್ಬಂದಿಯ ಸೇವೆಯನ್ನು ಒದಗಿಸುವುದು ಕಾನೂನು ಬದ್ಧವಾಗಿರತಕ್ಕದ್ದು.

(3) ರಫ್ತು ಮತ್ತು ಆಮದು ಬ್ಯಾಂಕಿನ ಅಧಿಕಾರಿಗಳ ಮತ್ತು ಇತರ ನೌಕರರ ಕರ್ತವ್ಯಗಳು ಮತ್ತು ವರ್ತನೆ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರ ಸೌಕರ್ಯಕ್ಕಾಗಿ ಭವಿಷ್ಯನಿಧಿ ಅಥವಾ ಯಾವುದೇ ಇತರ ನಿಧಿಯ ಸ್ಥಾಪನೆ ಮತ್ತು ನಿರ್ವಹಣೆ ಇವು ನಿಯಮಿಸಬಹುದಾದಂತೆ ಇರತಕ್ಕದ್ದು.

**28. ಅಧಿಕಾರಗಳ ಪ್ರತ್ಯಾಯೋಜನೆ.-** ಮಂಡಲಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು, ಮಂಡಲಿಯು, ತಾನು ಅವಶ್ಯವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು, ರಫ್ತು ಮತ್ತು ಆಮದು ಬ್ಯಾಂಕಿನ ಯಾರೇ ನಿರ್ದೇಶಕನಿಗೆ ಅಥವಾ ಯಾರೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ ಪ್ರತ್ಯಾಯೋಜಿಸತಕ್ಕದ್ದು.

**29. ವಿವರ ಪಟ್ಟಿಕೆಗಳು.-** ರಫ್ತು ಮತ್ತು ಆಮದು ಬ್ಯಾಂಕು, ಕೇಂದ್ರ ಸರ್ಕಾರವು ಅವಶ್ಯಪಡಿಸಬಹುದಾದಂಥ ವಿವರಪಟ್ಟಿಕೆಗಳನ್ನು ಕಾಲಕಾಲಕ್ಕೆ ಆ ಸರ್ಕಾರಕ್ಕೆ ಒದಗಿಸತಕ್ಕದ್ದು.

**30. ವಿಶ್ವಾಸ ಮತ್ತು ರಹಸ್ಯ ಪಾಲನೆಯ ಕರ್ತವ್ಯ.-** (1) ರಫ್ತು ಮತ್ತು ಆಮದು ಬ್ಯಾಂಕು, ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅನ್ಯಥಾ ಅಗತ್ಯಪಡಿಸಲಾಗಿರುವುದನ್ನು ಹೊರತುಪಡಿಸಿ, ತನ್ನ ಘಟಕಗಳಿಗೆ ಅಥವಾ ಅವರ ವ್ಯವಹಾರಗಳಿಗೆ ಸಂಬಂಧಿಸಿದ ಮಾಹಿತಿಯನ್ನು, ಬ್ಯಾಂಕು ಬಹಿರಂಗಪಡಿಸುವುದು, ಕಾನೂನಿಗೆ ಅಥವಾ ಬ್ಯಾಂಕರುಗಳ ನಡುವೆ ರೂಢಿಯಾಗಿರುವ ಪದ್ಧತಿ ಮತ್ತು ವಾಡಿಕೆಗೆ ಅನುಸಾರವಾಗಿರುವಂಥ, ಅವಶ್ಯಕವಾಗಿರುವಂಥ ಅಥವಾ ಸೂಕ್ತವಾಗಿರುವಂಥ ಸಂದರ್ಭಗಳಲ್ಲಿ ಹೊರತುಪಡಿಸಿ, ಯಾವುದೇ ಅಂಥ ಮಾಹಿತಿಯನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) ರಫ್ತು ಮತ್ತು ಆಮದು ಬ್ಯಾಂಕು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಯ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರದಿಂದ, ಅಭಿವೃದ್ಧಿ ಬ್ಯಾಂಕಿನಿಂದ ಅಥವಾ ಯಾವುದೇ ಅನುಸೂಚಿತ ಬ್ಯಾಂಕಿನಿಂದ ಅಥವಾ ಈ ಸಂಬಂಧವಾಗಿ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಇತರ ಹಣಕಾಸು ಸಂಸ್ಥೆಯಿಂದ ಆ ಉದ್ದೇಶಕ್ಕಾಗಿ ಅದು ಯುಕ್ತವೆಂದು ಪರಿಗಣಿಸಬಹುದಾದಂಥ ಸಾಲದ ಬಗೆಗಿನ ಮಾಹಿತಿಯನ್ನು ಅಥವಾ ಇತರ ಮಾಹಿತಿಯನ್ನು, ಅದು ಯುಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ ಸಂಗ್ರಹಿಸಬಹುದು ಅಥವಾ ಅವುಗಳಿಗೆ ಅಂಥ ಮಾಹಿತಿಯನ್ನು ಒದಗಿಸಬಹುದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ, " ಸಾಲದ ಬಗೆಗಿನ ಮಾಹಿತಿ" ಎಂಬ ಪದಾವಳಿಗೆ ಭಾರತ ರಿಸರ್ವ್ ಬ್ಯಾಂಕು ಅಧಿನಿಯಮ, 1934 (1934ರ 2)ರ 45ಎ ಪ್ರಕರಣದ (ಸಿ) ಖಂಡದಲ್ಲಿರುವಂಥದೇ ಅರ್ಥವೇ ಇರತಕ್ಕದ್ದು, ಆದರೆ, ಆ ಅಧಿನಿಯಮದಲ್ಲಿ ಉಲ್ಲೇಖಿಸಿದ " ಬ್ಯಾಂಕಿಂಗ್ ಕಂಪನಿ" ಎಂಬುದಕ್ಕೆ ಹಿಂದೆ ಹೇಳಿದಂತೆ ಅಭಿವೃದ್ಧಿ ಬ್ಯಾಂಕು, ಯಾವುದೇ ಅನುಸೂಚಿತ ಬ್ಯಾಂಕು ಅಥವಾ ಇತರ ಹಣಕಾಸು ಸಂಸ್ಥೆ ಎಂಬ ಅರ್ಥವೇ ಇರತಕ್ಕದ್ದು.

(3) ರಫ್ತು ಮತ್ತು ಆಮದು ಬ್ಯಾಂಕಿನ ಅಥವಾ ಅಭಿವೃದ್ಧಿ ಬ್ಯಾಂಕಿನ ಯಾವ ನಿರ್ದೇಶಕನ, ಸಮಿತಿಯ ಸದಸ್ಯನ, ಲೆಕ್ಕ ಪರಿಶೋಧಕನ ಅಥವಾ ಅಧಿಕಾರಿಯ ಅಥವಾ ಇತರ ನೌಕರನ ಸೇವೆಗಳನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಫ್ತು ಮತ್ತು ಆಮದು ಬ್ಯಾಂಕು ಬಳಸಿಕೊಳ್ಳುತ್ತಿದೆಯೋ ಆ ಪ್ರತಿಯೊಬ್ಬ ನಿರ್ದೇಶಕನು, ಸಮಿತಿಯ ಸದಸ್ಯನು, ಲೆಕ್ಕಪರಿಶೋಧಕನು ಅಥವಾ ಅಧಿಕಾರಿಯು ಅಥವಾ ಇತರ ನೌಕರನು ತನ್ನ ಕರ್ತವ್ಯಗಳಲ್ಲಿ ತೊಡಗುವುದಕ್ಕೆ ಮುಂಚೆ ಮೊದಲನೇ ಅನುಸೂಚಿಯಲ್ಲಿ ಕೊಟ್ಟಿರುವ ನಮೂನೆಯಲ್ಲಿ ವಿಶ್ವಾಸ ಮತ್ತು ರಹಸ್ಯದ ಘೋಷಣೆಯನ್ನು ಮಾಡತಕ್ಕದ್ದು.

**31. ನೇಮಕಾತಿಗಳಲ್ಲಿನ ನ್ಯೂನತೆಗಳಿಂದ ಕೃತ್ಯ ಮೊದಲಾದವುಗಳು ಅಸಿಂಧುವಾಗಬಾರದು.-** (1) ಮಂಡಲಿಯಲ್ಲಿ ಅಥವಾ ಸಂದರ್ಭಾನುಸಾರ ಸಮಿತಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವುದೆಂಬ ಅಥವಾ ಅದರ ರಚನೆಯಲ್ಲಿ ದೋಷ ಇರುವುದೆಂಬ ಕಾರಣ ಮಾತ್ರದಿಂದಲೇ ರಫ್ತು ಮತ್ತು ಆಮದು ಬ್ಯಾಂಕಿನ ಅಥವಾ ಮಂಡಲಿಯ ಯಾವುದೇ ಸಮಿತಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು ನಿರ್ದೇಶಕನಾಗಿ ಸದ್ಭಾವನೆಯಿಂದ ಮಾಡಿದ ಯಾವುದೇ ಕೃತ್ಯವನ್ನು ಅವನು ನಿರ್ದೇಶಕನಾಗಿರಲು ಅನರ್ಹನಾಗಿದ್ದನು ಎಂಬ ಅಥವಾ ಅವನ ನೇಮಕಾತಿಯಲ್ಲಿ ಯಾವುದೇ ದೋಷ ಇತ್ತು ಎಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗಿದೆ ಎಂದು ಭಾವಿಸತಕ್ಕದ್ದಲ್ಲ.

**32. ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದಂತೆ ರಫ್ತು ಮತ್ತು ಆಮದು ಬ್ಯಾಂಕಿನೊಂದಿಗೆ ಮಾಡಿಕೊಂಡ ವ್ಯವಸ್ಥೆಯ ಸಲುವಳಿ.–** ರಫ್ತು ಮತ್ತು ಆಮದು ಬ್ಯಾಂಕು ಯಾವುದೇ ಕಂಪನಿಯೊಂಂದಿಗೆ ಮಾಡಿಕೊಂಡಿರುವ ಯಾವುದೇ ವ್ಯವಸ್ಥೆಯು ಆ ಕಂಪನಿಯ ಒಬ್ಬ ಅಥವಾ ಹೆಚ್ಚಿನ ನಿರ್ದೇಶಕರನ್ನು ರಫ್ತು ಮತ್ತು ಆಮದು ಬ್ಯಾಂಕು ನೇಮಕ ಮಾಡುವ ಬಗ್ಗೆ ಉಪಬಂಧಿಸಿರುವಲ್ಲಿ, ಮತ್ತು ಅದರ ಅನುಸಾರವಾಗಿ ಮಾಡಲಾದ ನಿರ್ದೇಶಕರ ಯಾವುದೇ ನೇಮಕಾತಿಯು, ಕಂಪನಿಗಳ ಅಧಿನಿಯಮ, 1956(1956ರ 1) ಇದರಲ್ಲಿ, ಅಥವಾ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಜ್ಞಾಪನ ಪತ್ರದಲ್ಲಿ ಅಥವಾ ಸಂಘದ ನಿಯಮಾವಳಿಗಳಲ್ಲಿ ಅಥವಾ ಕಂಪನಿಗಳಿಗೆ ಸಂಬಂಧಿಸಿದ ಯಾವುದೇ ಇತರ ಲಿಖಿತದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಸಿಂಧುವಾಗಿರತಕ್ಕದ್ದು ಮತ್ತು ಪರಿಣಾಮಕಾರಿ ಯಾಗಿರತಕ್ಕದ್ದು; ಮತ್ತು ಮೇಲೆ ಹೇಳಿದಂಥ ಯಾವುದೇ ಕಾನೂನಿನಲ್ಲಿ ಅಥವಾ ಲಿಖಿತದಲ್ಲಿ ಷೇರು ಅರ್ಹತೆ ವಯೋಮಿತಿ, ನಿರ್ದೇಶಕರ ಸಂಖ್ಯೆ, ನಿರ್ದೇಶಕರನ್ನು ಪದದಿಂದ ತೆಗೆದು ಹಾಕುವುದು ಮತ್ತು ಅಂಥವೇ ಷರತ್ತುಗಳಿಗೆ ಸಂಬಂಧಿಸಿದಂತೆ ಒಳಗೊಂಡಿರುವ ಯಾವುದೇ ಉಪಬಂಧವು ಮೇಲೆ ಹೇಳಿದ ವ್ಯವಸ್ಥೆಗನುಸಾರವಾಗಿ ರಫ್ತು ಮತ್ತು ಆಮದು ಬ್ಯಾಂಕು ನೇಮಕ ಮಾಡಿರುವ ಯಾವನೇ ನಿರ್ದೇಶಕನಿಗೆ ಅನ್ವಯವಾಗತಕ್ಕದ್ದಲ್ಲ.

(2) ಮೇಲೆ ಹೇಳಿದಂತೆ ನೇಮಕ ಮಾಡಲಾದ ಯಾವನೇ ನಿರ್ದೇಶಕನು,–

(ಎ) ರಫ್ತು ಮತ್ತು ಆಮದು ಬ್ಯಾಂಕಿನ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು ಮತ್ತು ಅವನನ್ನು ರಫ್ತು ಮತ್ತು ಆಮದು ಬ್ಯಾಂಕಿನ ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು ಅಥವಾ ಅವನ ಬದಲಾಗಿ ಯಾವನೇ ವ್ಯಕ್ತಿಯನ್ನು ನೇಮಿಸಬಹುದು.

(ಬಿ) ತಾನು ನಿರ್ದೇಶಕನಾಗಿರುವ ಕಾರಣ ಮಾತ್ರದಿಂದಲೇ ಅಥವಾ ನಿರ್ದೇಶಕನಾಗಿ ತನ್ನ ಕರ್ತವ್ಯಗಳ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡದೆ ಬಿಟ್ಟ ಯಾವುದೇ ಕಾರ್ಯದ ಬಗ್ಗೆ ಅಥವಾ ಆ ಸಂಬಂಧದಲ್ಲಿನ ಯಾವುದೇ ಕಾರ್ಯದ ಬಗ್ಗೆ ಯಾವುದೇ ಬಾಧ್ಯತೆ ಅಥವಾ ಹೊಣೆಗಾರಿಕೆಗೆ ಗುರಿಯಾಗತಕ್ಕದ್ದಲ್ಲ.

(ಸಿ) ಸರದಿಯ ಮೂಲಕ ನಿವೃತ್ತಿಗೆ ಗುರಿಯಾಗತಕ್ಕದ್ದಲ್ಲ ಮತ್ತು ಅಂಥ ನಿವೃತ್ತಿಗೆ ಗುರಿಯಾಗುವ ನಿರ್ದೇಶಕರ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವಾಗ ಅವನನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**33. ನಿರ್ದೇಶಕರಿಗೆ ನಷ್ಟ ಭರ್ತಿ.–** (1) ಪ್ರತಿಯೊಬ್ಬ ನಿರ್ದೇಶಕನು, ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಅದರ ಸಂಬಂಧದಲ್ಲಿ ವಹಿಸಿರುವ ಎಲ್ಲ ನಷ್ಟಗಳನ್ನು ಮತ್ತು ವೆಚ್ಚಗಳನ್ನು ಅವನ ಉದ್ದೇಶಪೂರ್ವಕ ಕೃತ್ಯದಿಂದಾಗಿ ಅಥವಾ ತಪ್ಪಿತದಿಂದಾಗಿ ಉಂಟಾಗಿರುವಂಥವುಗಳನ್ನು ಹೊರತುಪಡಿಸಿ, ರಫ್ತು ಮತ್ತು ಆಮದು ಬ್ಯಾಂಕು ಅವನಿಗೆ ನಷ್ಟ ಭರ್ತಿ ಮಾಡಿ ಕೊಡತಕ್ಕದ್ದು.

(2) ಒಬ್ಬ ನಿರ್ದೇಶಕನು, ರಫ್ತು ಮತ್ತು ಆಮದು ಬ್ಯಾಂಕಿನ ಯಾರೇ ಇತರ ನಿರ್ದೇಶಕನಿಗೆ ಅಥವಾ ಯಾರೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ, ರಫ್ತು ಮತ್ತು ಆಮದು ಬ್ಯಾಂಕಿನ ಪರವಾಗಿ ಆರ್ಜಿಸಿದ ಅಥವಾ ತೆಗೆದುಕೊಂಡ ಭದ್ರತೆಯ ಮೌಲ್ಯದ ಅಪರ್ಯಾಪ್ತತೆಯಿಂದಾದ ಅಥವಾ ಕೊರತೆಯಿಂದಾದ ಅಥವಾ ಅದರ ಯಾವುದೇ ಸ್ವತ್ತಿನ ಅಥವಾ ಭದ್ರತೆಯ ಸ್ವಾಮ್ಯದಿಂದಾಗಿ ರಫ್ತು ಮತ್ತು ಆಮದು ಬ್ಯಾಂಕಿಗೆ ಉಂಟಾಗಿರುವ ಯಾವುದೇ ನಷ್ಟದ ಅಥವಾ ವೆಚ್ಚದ ಬಗ್ಗೆ ಅಥವಾ ಯಾವನೇ ಸಾಲಗಾರನ ಅಥವಾ ರಫ್ತು ಮತ್ತು ಆಮದು ಬ್ಯಾಂಕಿನ ಬಾಧ್ಯತೆಯಲ್ಲಿರುವ ಯಾರೇ ವ್ಯಕ್ತಿಯ ದಿವಾಳಿತನ ಅಥವಾ ಅಕ್ರಮ ಕೃತ್ಯದ ಬಗ್ಗೆ ಅಥವಾ ತನ್ನ

ಪದದ ಕರ್ತವ್ಯಗಳ ನಿರ್ವಹಣೆಯಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟಂತೆ ಸದ್ಭಾವನೆಯಿಂದ ಮಾಡಿದ ಯಾವುದೇ ಕಾರ್ಯದ ಬಗ್ಗೆ ಜವಾಬ್ದಾರನಾಗತಕ್ಕದ್ದಲ್ಲ.

**34. ಸದ್ಭಾವನೆಯಿಂದ ಕೈಗೊಂಡ ಕ್ರಮಗಳ ರಕ್ಷಣೆ.**- ರಫ್ತು ಮತ್ತು ಆಮದು ಬ್ಯಾಂಕಿನ ವಿರುದ್ಧ ಅಥವಾ ಆ ಬ್ಯಾಂಕಿನ ಯಾರೇ ನಿರ್ದೇಶಕನ ಅಥವಾ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಅಥವಾ ಈ ಅಧಿನಿಯಮದ ಮೇರೆಗೆ ಯಾವುವೇ ಪ್ರಕಾರ್ಯಗಳನ್ನು ನೆರವೇರಿಸಲು ರಫ್ತು ಮತ್ತು ಆಮದು ಬ್ಯಾಂಕು ಅಧಿಕೃತಗೊಳಿಸಿದ ಯಾರೇ ಇತರ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಥವಾ ಯಾವುದೇ ಇತರ ಕಾನೂನಿಗೆ ಅಥವಾ ಕಾನೂನಿನ ಬಲವನ್ನು ಹೊಂದಿರುವ ಯಾವುದೇ ಉಪಬಂಧಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದಾಗಿ ಉಂಟಾದ ಅಥವಾ ಉಂಟಾಗುವ ಸಂಭವವಿರುವ ನಷ್ಟದ ಅಥವಾ ಹಾನಿಯ ಬಗ್ಗೆ ಯಾವುದೇ ದಾವೆಯನ್ನು ಅಥವಾ ಇತರ ಕಾನೂನಿನ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**35. ರಫ್ತು ಮತ್ತು ಆಮದು ಬ್ಯಾಂಕಿನ ಸಂಬಂಧದಲ್ಲಿ 1891ರ ಅಧಿನಿಯಮ 18 ರ ಅನ್ವಯ.**- ಬ್ಯಾಂಕರುಗಳ ಪುಸ್ತಕ ಸಾಕ್ಷ್ಯ ಅಧಿನಿಯಮ, 1891 ಇದು ರಫ್ತು ಮತ್ತು ಆಮದು ಬ್ಯಾಂಕಿನ ಸಂಬಂಧದಲ್ಲಿ ಅಧಿನಿಯಮದ 2ನೇ ಪ್ರಕರಣದಲ್ಲಿ ಪರಿಭಾಷಿಸಿದಂತೆ, ಅದು ಒಂದು ಬ್ಯಾಂಕ್ ಆಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

**36. 1949ರ ಅಧಿನಿಯಮ ಸಂಖ್ಯೆ 10ರ 34ಎ ಪ್ರಕರಣ ಮತ್ತು 36ಎಡಿ ಪ್ರಕರಣಗಳು ಮಾತ್ರ ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯಿಸುವುದು.**- ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949ರ 34ಎ ಪ್ರಕರಣ ಮತ್ತು 36ಎಡಿ ಪ್ರಕರಣಗಳನ್ನು ಹೊರತುಪಡಿಸಿ ಆ ಅಧಿನಿಯಮದಲ್ಲಿ ಒಳಗೊಂಡಿರುವುದಾವುದೂ ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯವಾಗತಕ್ಕದ್ದಲ್ಲ.

**37. 1961ರ ಅಧಿನಿಯಮ ಸಂಖ್ಯೆ 43 ಮತ್ತು 1964ರ ಅಧಿನಿಯಮ 7 - ಇವು ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯಿಸುವುದು.**- ಆದಾಯ ತೆರಿಗೆ ಅಧಿನಿಯಮ, 1961 ಅಥವಾ ಕಂಪನಿಗಳ (ಲಾಭಗಳು) ಅತಿಕರ ಅಧಿನಿಯಮ, 1964 ಅಥವಾ ಆದಾಯ, ಲಾಭಗಳು ಅಥವಾ ಪ್ರಾಪ್ತಿಗಳ ಮೇಲಿನ ತೆರಿಗೆಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಫ್ತು ಮತ್ತು ಆಮದು ಬ್ಯಾಂಕು - ಈ ಕೆಳಕಂಡವುಗಳ ಸಂಬಂಧದಲ್ಲಿ ಆದಾಯ ತೆರಿಗೆಯನ್ನು, ಅತಿಕರವನ್ನು ಅಥವಾ ಯಾವುದೇ ಇತರ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದಲ್ಲ,-

(ಎ) ರಫ್ತು - ಅಭಿವೃದ್ಧಿ ನಿಧಿಗೆ ಒದಗಿಬರುವ ಯಾವುವೇ ಆದಾಯ, ಲಾಭಗಳು ಅಥವಾ ಪ್ರಾಪ್ತಿಗಳು ಅಥವಾ ಆ ನಿಧಿಯ ಲೆಕ್ಕಕ್ಕೆ ಸ್ವೀಕರಿಸಿದ ಯಾವುದೇ ಮೊಬಲಗು; ಮತ್ತು

(ಬಿ) ರಫ್ತು ಮತ್ತು ಆಮದು ಬ್ಯಾಂಕು ಪಡೆದ ಯಾವುದೇ ಆದಾಯ, ಯಾವುವೇ ಲಾಭಗಳು ಅಥವಾ ಪ್ರಾಪ್ತಿಗಳು ಅಥವಾ ಸ್ವೀಕರಿಸಿದ ಯಾವುದೇ ಮೊಬಲಗು.

**38. ರಫ್ತು ಮತ್ತು ಆಮದು ಬ್ಯಾಂಕ್‌ನ ಸಮಾಪನ.**- ಕಂಪನಿಗಳ ಅಥವಾ ನಿಗಮಗಳ ಪರಿಸಮಾಪನೆಗೆ ಅನ್ವಯಿಸುವ ಯಾವುದೇ ಕಾನೂನಿನ ಯಾವುದೇ ಉಪಬಂಧವು ರಫ್ತು ಮತ್ತು ಆಮದು ಬ್ಯಾಂಕಿಗೆ ಅನ್ವಯಿಸತಕ್ಕದ್ದಲ್ಲ ಮತ್ತು ರಫ್ತು ಮತ್ತು ಆಮದು ಬ್ಯಾಂಕು ಕೇಂದ್ರ ಸರ್ಕಾರದ ಆದೇಶದ ಮೂಲಕವಾಗಿ ಹೊರತು ಮತ್ತು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಹೊರತು ಸಮಾಪನಕ್ಕೆ ಒಳಪಡತಕ್ಕದ್ದಲ್ಲ.

**39. ವಿನಿಯಮಗಳ ರಚನಾಧಿಕಾರ.**- (1) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ

ಉದ್ದೇಶಕ್ಕಾಗಿ ಯಾವ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ಅವಶ್ಯ ಅಥವಾ ಯುಕ್ತವಾಗಿರುವುದೋ ಆ ಎಲ್ಲಾ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಲು ಈ ಅಧಿನಿಯಮಕ್ಕೆ ಅಸಂಗತವಲ್ಲದ ವಿನಿಯಮಗಳನ್ನು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಲಾದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು- ಈ ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ,-

(ಎ) ಈ ಅಧಿನಿಯಮದ ಮೇರೆಗೆ ರಚಿಸಲಾದ ಮಂಡಲಿಯ ಅಥವಾ ಯಾವುದೇ ಸಮಿತಿಯ ಸಭೆಗಳ ಕಾಲ ಮತ್ತು ಸ್ಥಳಗಳು ಮತ್ತು ವ್ಯವಹಾರಗಳ ನಿರ್ವಹಣೆಗಾಗಿ ಅವಶ್ಯವಾದ ಕೋರಂ ಅನ್ನು ಒಳಗೊಂಡು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ನಿರ್ದೇಶಕರಿಗೆ ಮತ್ತು ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬಹುದಾದ ಫೀಜುಗಳು ಮತ್ತು ಭತ್ಯೆಗಳು;

(ಸಿ) ರಫ್ತು ಅಭಿವೃದ್ಧಿ ನಿಧಿಯ ಮತ್ತು ರಫ್ತು - ಆಮದು ಬ್ಯಾಂಕಿನ ಜಮಾ ಖರ್ಚು ಪಟ್ಟಿಗಳನ್ನು ಮತ್ತು ಲೆಕ್ಕಪತ್ರಗಳನ್ನು ತಯಾರಿಸತಕ್ಕ ನಮೂನೆ ಮತ್ತು ರೀತಿ;

(ಡಿ) ರಫ್ತು ಮತ್ತು ಆಮದು ಬ್ಯಾಂಕಿನ ಅಧಿಕಾರಿಗಳು ಮತ್ತು ಇತರ ನೌಕರರ ಕರ್ತವ್ಯಗಳು ಮತ್ತು ಕರ್ತವ್ಯ ನಿರ್ವಹಣೆ, ಮತ್ತು ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಇ) ರಫ್ತು ಮತ್ತು ಆಮದು ಬ್ಯಾಂಕಿನ ಅಧಿಕಾರಿಗಳು ಮತ್ತು ಇತರ ನೌಕರರ ಪ್ರಯೋಜನಕ್ಕಾಗಿ ಭವಿಷ್ಯ ನಿಧಿ ಅಥವಾ ಯಾವುದೇ ಇತರ ನಿಧಿಯ ಸ್ಥಾಪನೆ ಮತ್ತು ನಿರ್ವಹಣೆ; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಮಂಡಲಿಯು ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ವಿನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ವಿನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**40. ಕೆಲವು ಅಧಿನಿಯಮಿತಿಗಳ ತಿದ್ದುಪಡಿ.-** [* * * *]

**41. ತೊಂದರೆಗಳನ್ನು ನಿವಾರಿಸುವ ಅಧಿಕಾರ-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅಂಥ ಉಪಬಂಧಗಳಿಗೆ ಅಸಂಗತವಲ್ಲದ ಯಾವುದೇ ಕಾರ್ಯವನ್ನು ಆದೇಶದ ಮೂಲಕ ಮಾಡಬಹುದು:

ಪರಂತು, ಈ ಅಧಿನಿಯಮವು ರಾಷ್ಟ್ರಪತಿಯ ಸಮ್ಮತಿಯನ್ನು ಪಡೆದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯಗೊಂಡ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

## ಮೊದಲನೇ ಅನುಸೂಚಿ

### (30 (3)ನೇ ಪ್ರಕರಣ ನೋಡಿ)

### ನಂಬಿಕೆ ಮತ್ತು ರಹಸ್ಯ ಪಾಲನೆಯ ಘೋಷಣೆ

-------ಎಂಬ ನಾನು, ಭಾರತದ ರಫ್ತು - ಆಮದು ಬ್ಯಾಂಕಿನ (ಸಂದರ್ಭಾನುಸಾರ) ನಿರ್ದೇಶಕನಾಗಿ ------ಸಮಿತಿಯ ಸದಸ್ಯನಾಗಿ/ಲೆಕ್ಕ ಪರಿಶೋಧಕನಾಗಿ/ಅಧಿಕಾರಿಯಾಗಿ ಅಥವಾ ಇತರ ನೌಕರನಾಗಿ ನಾನು ನಿರ್ವಹಿಸತಕ್ಕ ಮತ್ತು ಸದರಿ ರಫ್ತು ಮತ್ತು ಆಮದು ಬ್ಯಾಂಕಿನಲ್ಲಿ ಅಥವಾ ಅದರ ಸಂಬಂಧದಲ್ಲಿ ನಾನು ಧಾರಣ ಮಾಡಿರುವ ಪದಕ್ಕೆ ಅಥವಾ ಸ್ಥಾನಕ್ಕೆ ಸೂಕ್ತವಾಗಿ ಸಂಬಂಧಪಡುವ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ, ಸತ್ಯವಾಗಿ ಮತ್ತು ನನ್ನ ಕೌಶಲ್ಯ ಮತ್ತು ಶಕ್ತ್ಯಾನುಸಾರ ನಿರ್ವಹಿಸುತ್ತೇನೆಂದೂ ಮತ್ತು ನೆರವೇರಿಸುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

ಇದಲ್ಲದೆ ಭಾರತದ ರಫ್ತು-ಆಮದು ಬ್ಯಾಂಕಿನ ವ್ಯವಹಾರಗಳಿಗೆ ಅಥವಾ ಸದರಿ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರ ಹೊಂದಿರುವ ಯಾವನೇ ವ್ಯಕ್ತಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಕಾನೂನುಬದ್ಧವಾಗಿ ಪಡೆಯಲು ಅರ್ಹನಾಗಿಲ್ಲದ ಯಾವನೇ ವ್ಯಕ್ತಿಗೆ ಅಂಥ ಯಾವುದೇ ಮಾಹಿತಿಯನ್ನು ತಿಳಿಸುವುದಿಲ್ಲವೆಂದು ಅಥವಾ ತಿಳಿಸಲು ಅವಕಾಶ ನೀಡುವುದಿಲ್ಲವೆಂದು ಅಥವಾ ಸದರಿ ಬ್ಯಾಂಕಿಗೆ ಸೇರಿದ ಅಥವಾ ಅದರ ಸ್ವಾಧೀನದಲ್ಲಿರುವ ಮತ್ತು ಸದರಿ ಬ್ಯಾಂಕಿನ ವ್ಯವಹಾರಗಳಿಗೆ ಅಥವಾ ಸದರಿ ಬ್ಯಾಂಕಿನೊಂದಿಗೆ ಯಾವುದೇ ವ್ಯವಹಾರ ಹೊಂದಿರುವ ಯಾವನೇ ವ್ಯಕ್ತಿಯ ವ್ಯವಹಾರಕ್ಕೆ ಸಂಬಂಧಿಸಿದ ಯಾವುವೇ ಪುಸ್ತಕಗಳನ್ನು ಅಥವಾ ದಸ್ತಾವೇಜುಗಳನ್ನು ಯಾವನೇ ಅಂಥ ವ್ಯಕ್ತಿಗೆ ಪರಿಶೀಲಿಸಲು ಅಥವಾ ನೋಡಲು ಅವಕಾಶ ಕೊಡುವುದಿಲ್ಲವೆಂದು ಸಹ ಘೋಷಿಸುತ್ತೇನೆ.

(ಸಹಿ)

ನನ್ನ ಸಮಕ್ಷಮದಲ್ಲಿ ಸಹಿ ಮಾಡಲಾಗಿದೆ.

## ಎರಡನೇ ಅನುಸೂಚಿ

(1988ರ 19ನೇ ಸಂಖ್ಯೆಯ ತಿದ್ದುಪಡಿ ಅಧಿನಿಯಮದ ಮೂಲಕ ಎರಡನೇ ಅನುಸೂಚಿಯನ್ನು ನಿರಸನಗೊಳಿಸಲಾಗಿದೆ)

* * * *